# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 301 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 10.06.2025 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 301 • PRGI No:KARKAN/2023/88055 • VIJAYANAGARA • 10.06.2025 • Tuesday • Page:04 • Rs:2






DC & SSLC TOPER TALK

scan to watch video



ಸರ್ಕಾರಿ ಶಾಲೆ, ನಮ್ಮ ಶಾಲೆ
ಗುಣಮಟ್ಟದ ಶಿಕ್ಷಣಕ್ಕೆ ಮೊದಲ ಹೆಜ್ಜೆ
(Government school, our school - the first step towards quality education.)

ಸರ್ಕಾರಿ ಶಾಲೆಗಳಲ್ಲಿ
2025-26ನೇ ಸಾಲಿನ
ಪ್ರವೇಶ ಉಚಿತ
FREE Admission

ಬನ್ನಿ, ಬೆಂಬಲಿಸಿ, ಸರ್ಕಾರಿ ಶಾಲೆಗಳನ್ನು ಬಲಪಡಿಸಿ (Come, support, strengthen government schools.) - ಹಂಪಿ ಟೈಮ್ಸ್ ಬಳಗ, ವಿಜಯನಗರ


## ಆನಂದ ಬಾಣ



## ರಾಜ್ಯಮಟ್ಟದ ಚಾರ್ಲ್ಸ್ ಡಾರ್ವಿನ್ ಶಿಕ್ಷಕ ಪ್ರಶಸ್ತಿಗೆ ಗಂಗಾನಹಳ್ಳಿ ಜಗದೀಶ ಆಯ್ಕೆ

**ಹಂಪಿ ಟೈಮ್ಸ್ ಕೂಡ್ಲಿಗಿ**



ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಮ್ಮನಕೇರಿಯ ಶಿಕ್ಷಕರಾದ ಗಂಗಾನ ಹಳ್ಳಿ ಜಗದೀಶ ಇವರು ತಾರಾ ಮಂಡಲ ಚಿತ್ರದುರ್ಗ ಸಂಸ್ಥೆಯ ವತಿಯಿಂದ 'ಮೇಧಾವಿ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್– ಶಿಕ್ಷಕ ಪ್ರಶಸ್ತಿ' ಗೆ ಭಾಜನರಾಗಿದ್ದಾರೆ

.ಶಾಲಾ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ, ವೈಜ್ಞಾನಿಕ ಚಿಂತನೆ ಬೆಳೆಸಲು ಹಾಗೂ ವಿಜ್ಞಾನ ಪ್ರತಿಭಾನ್ವೇಷಣೆ – ಪರೀಕ್ಷೆಯ ಸಂಘಟನಾ ಕೌಶಲ್ಯ, ಪರೀಕ್ಷೆಯಲ್ಲಿ ಶಾಲಾ ವಿದ್ಯಾರ್ಥಿಗಳ ಉತ್ತಮ ಸಾಧನೆಗೆ ಪ್ರೇರಣೆ ನೀಡಿದ ಶಿಕ್ಷಕರ ಪ್ರಯತ್ನವನ್ನು ಗುರುತಿಸಿ ಈ ಪ್ರಶಸ್ತಿಯನ್ನು ಗೌರವಪೂರ್ವಕವಾಗಿ ಜೂ.22 ರಂದು ಭಾನುವಾರ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನ ಧಾರವಾಡದಲ್ಲಿ ತಾರಾ ಮಂಡಲ ಹಾಗೂ ಪುಟಾಣಿ ವಿಜ್ಞಾನ ಇವರ ಸಂಯುಕ್ತಾಶ್ರಯದಲ್ಲಿ ನಡೆಯುವ ರಾಜ್ಯಮಟ್ಟದ ಡಾರ್ವಿನ್ ವಿಜ್ಞಾನ ಸಮಾವೇಶದಲ್ಲಿ ನೀಡಿ ಗೌರವಿಸಲಾಗುವುದು ಎಂದು ತಾರಾಮಂಡಲ ಸಂಸ್ಥೆಯ ಗೌರವ ನಿರ್ದೇಶಕರಾದ ಚಳ್ಳಕೆರೆ ಯರ್‍ರಿಸ್ವಾಮಿ ತಿಳಿಸಿದ್ದಾರೆ.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

# ಸಮಗ್ರ ಏತ ನೀರಾವರಿ ಜಾರಿಗೆ ರೈತರ ಆಗ್ರಹ

### ರೈತ ಸಂಘಟನೆಯಿಂದ ಶಾಸಕರಿಗೆ ಮನವಿ ಸಲ್ಲಿಕೆ | ನಿರ್ಲಕ್ಷ್ಯಸಿದರೆ ಬಂದ್ ಎಚ್ಚರಿಕೆ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ತುಂಗಭದ್ರಾ ಮುಳುಗಡೆ ಪ್ರದೇಶದ ಗ್ರಾಮಗಳಿಗೆ ಸಮರ್ಪಕ ಏತ ನೀರಾವರಿ ಯೋಜನೆ ಜಾರಿಗೊಳಿಸುವಂತೆ ಒತ್ತಾಯಿಸಿ ಪಟ್ಟಣದ ಶಾಸಕರ ಕಛೇರಿಯಲ್ಲಿ ಶಾಸಕ ಕೆ.ನೇಮಿರಾಜ ನಾಯ್ಕ ಅವರಿಗೆ ಸೋಮವಾರ ಮನವಿ ಸಲ್ಲಿಸದರು.

ರಾಜ್ಯ ರೈತ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಬಿ.ಗೋಣಿಬಸಪ್ಪ ಮಾತನಾಡಿ, ತುಂಗಭದ್ರಾ ಜಲಾಶಯದಿಂದ ಮುಳುಗಡೆ ಹೊಂದಿ ಪುನರ್ವಸತಿ ಪಡೆದ ತಾಲೂಕಿನ ಚಿಲುಗೋಡು ಗ್ರಾಮದ ಮಾನಮಟ್ಟಿ, ಬೆಂಚಿ ಕಟ್ಟಿ, ಕುಂಟವರ್ಣಕಟ್ಟಿ ಏತ ನೀರಾವರಿ ಯೋಜನೆಗಳ ಜಾರಿಗೊಳಿಸುವಂತೆ ಒತ್ತಾಯಿಸಿ ಈಗಾಗಲೇ ಚಿಲುಗೋಡು ಗ್ರಾಮದಿಂದ ಹಗರಿಬೊಮ್ಮನಹಳ್ಳಿಯ ಬಸವೇಶ್ವರ ವೃತ್ತದವರೆಗೆ ಪಾದಯಾತ್ರೆ ಹಮ್ಮಿಕೊಂಡಿದ್ದೆವು. ಆಗ ಶಾಸಕರಿಗೆ ಹಾಗೂ ತಹಶೀಲ್ದಾರರಿಗೆ ಒತ್ತಾಯ ಪತ್ರ ಕೊಟ್ಟಾಗ ಶಾಸಕರು ಭರವಸೆ ನೀಡಿದ್ದರು. ಶಾಸಕರು ನೀಡಿದ ಭರವಸೆಗಳಿಗೆ ಅಧಿಕೃತ ಮಾಹಿತಿ ನೀಡಬೇಕು ಹಾಗೂ ತಾಲೂಕಾಡಳಿತದಿಂದ ಜಿಲ್ಲಾಡಳಿತಕ್ಕೆ ಈ ಭಾಗದ ರೈತರ ಸಮಸ್ಯೆಗಳನ್ನು ಮಾಹಿತಿ ನೀಡಿ ಪರಿಹಾರ ಒದಗಿಸಬೇಕು. ಏಣಿಗಿ ಗ್ರಾಮದ ಏತ ನೀರಾವರಿಯ ಪಂಪ್‌ಹೌಸ್ ಬಿದ್ದಿದ್ದು ಕಾರ್ಯ ಸ್ಥಗಿತಗೊಂಡಿದೆ, ಶೀಘ್ರವೇ ಸರಿಪಡಿಸಬೇಕು. ರೈತರ ಸಮಸ್ಯೆಗಳನ್ನು ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ಬನ್ನಿಗೋಳದ ಕುಡಿಯುವ ನೀರಿನ ಪಂಪ್‌ಹೌಸ್ ಬಂದ್ ಮಾಡಿ ಪ್ರತಿಭಟನೆ ನಡೆಸಲಾಗುವುದು. ಸಾರಿಗೆ ವ್ಯವಸ್ಥೆ ಸೇರಿ ಹಗರಿಬೊಮ್ಮನಹಳ್ಳಿ ಬಂದ್ ಹಾಗೂ ಹೊಸಪೇಟೆ ತಾಲೂಕಿನ ಡಣಾಪುರ ಹತ್ತಿರ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡುವ ಮೂಲಕ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ವೇಳೆಯಲ್ಲಿ ರೈತ ಸಂಘದ ಪದಾಧಿಕಾರಿಗಳಾದ ವಿ.ನಾಗೇಂದ್ರಪ್ಪ, ಜಿ.ಮೆಹಬೂಬ್ ಸಾಬ್, ಹೆಚ್.ಮಹೇಶ, ಜೆ.ಎಮ್.ರುದ್ರಮುನಿಸ್ವಾಮಿ, ಕೆ.ನಾಗಪ್ಪ ಸೇರಿದಂತೆ ಇತರರಿದ್ದರು.

## ಸಮಗ್ರ ಶಿಕ್ಷಣ ಯೋಜನೆಯಡಿ ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**




2025–26ನೇ ಶೈಕ್ಷಣಿಕ ಸಾಲಿಗೆ ತಾಲೂಕುಗಳಲ್ಲಿ ಖಾಲಿಯಿರುವ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ವಿಭಾಗ ತಲಾ 02 ರಂತೆ ವಿಶೇಷ ಸಂಪನ್ಮೂಲ ಶಿಕ್ಷಕರ (ಬಿಐಆರ್‌ಟಿ) ಒಟ್ಟು 20 ಹುದ್ದೆಗಳಿಗೆ ಅರ್ಹ ಶಿಕ್ಷಕರನ್ನು ನೇಮಿಸಿಕೊಳ್ಳಲು ನೇರಗುತ್ತಿಗೆಯಡಿ ತಾತ್ಕಾಲಿಕವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ವೆಂಕಟೇಶ ರಾಮಚಂದ್ರಪ್ಪ ತಿಳಿಸಿದ್ದಾರೆ.

ಪೂರ್ವ ಪ್ರಾಥಮಿಕ ವಿಭಾಗ 1 ರಿಂದ 5ನೇ ತರಗತಿ ಹಾಗೂ ಪ್ರೌಢ ವಿಭಾಗ 6 ರಿಂದ 8ನೇ ತರಗತಿ ಮತ್ತು 9 ರಿಂದ 12ನೇ ತರಗತಿಗೆ ಬೋಧಿಸಲು ಶಿಕ್ಷಕರು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಆರ್‌ಸಿಐನಲ್ಲಿ ನೋಂದಣಿ ಹೊಂದಿದ ಹಾಗೂ ಸಿಆರ್‌ಆರ್ ನಂಬರ್ ಮಾನ್ಯತೆ ಹೊಂದಿರುವ ಹಾಗೂ ಚಾಲ್ತಿಯಲ್ಲಿರುವ ಸಂಸ್ಥೆಗಳಿಂದ ನಿಗದಿತ ವಿದ್ಯಾರ್ಹತೆ ಹೊಂದಿರಬೇಕು, ಸೇವಾ ಜ್ಯೇಷ್ಠತೆ ಪರಿಗಣಿಸಲಾಗುವುದು. ಜೂ.10 ರಿಂದ 16 ರೊಳಗಾಗಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಜಿಲ್ಲಾ ಶಾಲಾ ಶಿಕ್ಷಣಾ ಇಲಾಖೆ ಕಚೇರಿಗೆ ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಚೇರಿಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ವಿದ್ಯಾರ್ಥಿಗಳು ಅಂಕಪಟ್ಟಿಗೆ ಸೀಮಿತ ಕೌಶಲ್ಯಾಭಿವೃದ್ಧಿಗೆ ಕೈಗಾರಿಕೆಗಳು ಕೈಜೋಡಿಸಿ

### ಡಾ.ಇ.ವಿ ರಮಣ ರೆಡ್ಡಿ ಹೇಳಿಕೆ | ಮೈನಿಂಗ್– ಸ್ಟೀಲ್ ಇಂಡಸ್ಟ್ರೀಸ್ ಜೊತೆ ಸಮಾಲೋಚನಾ ಸಭೆ



**ಹಂಪಿ ಟೈಮ್ಸ್ ಬಳ್ಳಾರಿ**

ಈ ಭಾಗದ ಕೈಗಾರಿಕೆ ವಲಯಗಳಲ್ಲಿ ಉದ್ಯೋಗ ಸೃಷ್ಟಿಸುವುದರ ಜೊತೆಗೆ ಯುವ ಸಮುದಾಯ ದಲ್ಲಿ ಕೌಶಲ್ಯಾಭಿವೃದ್ಧಿ ಹೆಚ್ಚಿಸಬೇಕು. ಇದಕ್ಕೆ ಕೈಗಾರಿಕೆಗಳೂ ಸಹ ಕೈಜೋಡಿಸಬೇಕು ಎಂದು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಪ್ರಾಧಿಕಾರದ ಅಧ್ಯಕ್ಷ ಡಾ.ಇ.ವಿ ರಮಣ ರೆಡ್ಡಿ ಅವರು ಹೇಳಿದರು.

ಸಂಡೂರು ತಾಲ್ಲೂಕಿನಲ್ಲಿ ಸ್ಕಿಲ್ ಪಾರ್ಕ್/ ಅಕಾಡೆಮಿ ಸ್ಥಾಪಿಸುವ ಸಂಬಂಧ ಮೈನಿಂಗ್ ಮತ್ತು ಸ್ಟೀಲ್ ಇಂಡಸ್ಟ್ರೀಸ್ ಹಾಗೂ ಪಾಲುದಾರರ ಜೊತೆ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿ ನೀಡುವ ನಿಟ್ಟಿನಲ್ಲಿ ಕೈಗಾರಿಕೆ–ಪಾಲುದಾರರೊಂದಿಗೆ ಸಮಾಲೋಚನಾ ಸಭೆ ಆಯೋಜಿಸಲಾಗಿದ್ದು, ಕೈಗಾರಿಕೆಗಳು ಮತ್ತು ಪಾಲುದಾರರ ನಡುವಿನ ಅಂತರವನ್ನು ಕಡಿಮೆ ಮಾಡಲು ಹಾಗೂ ಉದ್ಯೋಗ ಕ್ಷೇತ್ರದಲ್ಲಿನ ಬೇಡಿಕೆಗಳನ್ನು ಪೂರೈಸಲು ಸಹಯೋಗ, ಸಹಭಾಗಿತ್ವ, ನಾವೀನ್ಯತೆ ಮತ್ತು ಕೌಶಲ್ಯ ಅಭಿವೃದ್ಧಿಯನ್ನು ಉತ್ತೇಜಿಸಬೇಕಿದೆ ಎಂದು ತಿಳಿಸಿದರು.

ಪ್ರಸ್ತುತದಲ್ಲಿ ವಿದ್ಯಾರ್ಥಿಗಳು ಕೇವಲ ಅಂಕಪಟ್ಟಿಗಳಿಗೆ ಸೀಮಿತವಾಗಿದ್ದಾರೆ. ಅವರಿಗೆ ಕೌಶಲ್ಯತೆ ಆಧಾರಿತ ಶಿಕ್ಷಣ ಮೌಲ್ಯವು ನೀಡಬೇಕಿದೆ. ಇದಕ್ಕೆ ಕೈಗಾರಿಕೆಗಳ ಸಹಭಾಗಿತ್ವವೂ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟರು. >>4

## ಹಂಪಿ ವ್ಯಾಪ್ತಿಯಲ್ಲಿ ನಿರ್ಮಾಣ ಚಟುವಟಿಕೆಗೆ ಅನುಮತಿ ಕಡ್ಡಾಯ

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ವಿಶ್ವ ಪರಂಪರೆ ಪ್ರದೇಶದ ವ್ಯಾಪ್ತಿಯಲ್ಲಿ ಅನುಮತಿಯಿಲ್ಲದೇ ನಿರ್ಮಾಣ ಹಾಗೂ ಅಭಿವೃದ್ಧಿ ಚಟುವಟಿಕೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ ಆಯುಕ್ತರು ತಿಳಿಸಿದ್ದಾರೆ.

ಹಂಪಿಯು ಯುನೆಸ್ಕೋ ಮಾನ್ಯತೆ ಪಡೆದ ವಿಶ್ವ ಪಾರಂಪರಿಕ ತಾಣವಾಗಿದ್ದು, ಐತಿಹಾಸಿಕ ಮತ್ತು ಸಾಂಸ್ಕೃತಿ ಮಹತ್ವವನ್ನು ಸಂರಕ್ಷಿಸಲು ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರವು ನಿಗದಿತ ನಿಯಮಾವಳಿಗಳನ್ನು ಜಾರಿಗೆ ತಂದಿದೆ. ನಿಯಮಾವಳಿಗಳನ್ವಯ ಪ್ರಾಧಿಕಾರದ ಮಿತಿಯೊಳಗಿನ ಯಾವುದೇ ಕಟ್ಟಡ ನಿರ್ಮಾಣ, ಪುನರ್ ನಿರ್ಮಾಣ, ವಿಸ್ತರಣೆ ಅಥವಾ ಯಾವುದೇ ಅಭಿವೃದ್ಧಿ ಚಟುವಟಿಕೆ ಪ್ರಾರಂಭಿಸುವ ಮುನ್ನ ಪ್ರಾಧಿಕಾರದ ಲಿಖಿತ ಅನುಮತಿಯನ್ನು ಪಡೆಯುವುದು ಕಡ್ಡಾಯವಾಗಿದೆ. ಅನುಮತಿಯಿಲ್ಲದೇ ನಡೆಯುವ ಯಾವುದೇ ನಿರ್ಮಾಣ ಕಾರ್ಯಗಳನ್ನು ಅನಧಿಕೃತ ಎಂದು ಪರಿಗಣಿಸಿ ಯಾವುದೇ ಮುನ್ಸೂಚನೆಯಿಲ್ಲದೆ ತೆರವುಗೊಳಿಸಲಾಗುವುದು ಮತ್ತು ಅನಧಿಕೃತ ಚಟುವಟಿಕೆಗಳಲ್ಲಿ ತೊಡಗುವವರ ವಿರುದ್ಧ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ ಕಾಯ್ದೆ 2002 ಹಾಗೂ ಇತರೆ ಸಂಬಂಧಿಸಿದ ಕಾಯ್ದೆಯಡಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರವಾಹಕ್ಕೆ ತುತ್ತಾಗುವ ಗ್ರಾಮಗಳಿಗೆ ಸೇನಾಧಿಕಾರಿಗಳ ಭೇಟಿ

**ಹಂಪಿ ಟೈಮ್ಸ್ ರಾಯಚೂರು**

ಭಾರತೀಯ ಸೇನೆಯ ಅಧಿಕಾರಿಗಳಾದ ಮೇಜರ್ ಬಸವ ಪ್ರಭು ಹಾಗೂ ಸಂಜೀವ್ ಸಾಧುನವರ್ ಅವರ ನೇತೃತ್ವದ ತಂಡವು, ರಾಯಚೂರ ಜಿಲ್ಲೆಯಲ್ಲಿ ಪ್ರವಾಹಕ್ಕೆ ತುತ್ತಾಗಬಹುದಾದ ಗ್ರಾಮಗಳಿಗೆ ಇತ್ತೀಚೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಜಿಲ್ಲೆಯಲ್ಲಿ 2025ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗುವ ಸಂಭವವಿದೆ ಎಂದು ಹಮಾಮಾನ ಇಲಾಖೆ ವರದಿ ನೀಡಿರುವ ಹಿನ್ನಲೆಯಲ್ಲಿ ಮುಂಜಾಗೃತಾ ಕ್ರಮವಾಗಿ ತಂಡವು ಈ ಕಾರ್ಯಕ್ರಮ ನಡೆಸಿತು.

ರಾಯಚೂರಿನ ತಾಲೂಕಿನ ಆತ್ಕರು, ಕುರ್ವಕರ್ದಾ, ಕುರ್ವಕಲಾ, ದೊಂಗರಾಂಪುರ, ಕಾಡೂರು ಹಾಗೂ ಗುರ್ಜಾಪೂರ, ಗುರ್ಜಾಪೂರ ಬ್ರಿಡ್ಜ್ ಕಮ್ ಬ್ಯಾರೇಜ ಹಾಗೂ ದೇವದುರ್ಗ ತಾಲೂಕಿನ ಅಪ್ರಾಳ, ಬಸವಂತಪುರ,



ಹಿರೇರಾಯಕುಂಪಿ, ಚಿಕ್ಕರಾಯಕುಂಪಿ, ಗೂಗಲ್, ಗೂಗಲ್ ಬ್ರಿಡ್ಜ್ ಕಮ್ ಬ್ಯಾರೇಜ್ ಸೇರಿದಂತೆ ಶಕ್ತಿನಗರದ ಹೆಲಿಪ್ಯಾಡ್ ಈ ಎಲ್ಲಾ ಕಡೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಂತರ ರಾಯಚೂರಿನ ಅಗ್ನಿಶಾಮಕ ದಳದ ಕಚೇರಿಗೆ ಭೇಟಿ ನೀಡಿ ಪ್ರವಾಹದ ಸಂದರ್ಭದಲ್ಲಿ ಉಪಯೋಗಿಸುವ ರಕ್ಷಣಾ ಸಾಮಗ್ರಿಗಳ ಬಗ್ಗೆ ಪರಿಶೀಲನೆ ನಡೆಸಿ, ಒಂದು ವೇಳೆ ಪ್ರವಾಹದ ಬಂದಲ್ಲಿ ಸಕಲ ರೀತಿಯಲ್ಲಿ ಸಜ್ಜಾಗಿರಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೇನಾ ಅಧಿಕಾರಿ ಅಭಯ ಕುಮಾರ್ ಹಾಗೂ ಸಂಜೀವ್ ಸಾಧುನವರ್ ಅವರು ಸೂಚಿಸಿದರು.

ಇದೇ ಸಂದರ್ಭದಲ್ಲಿ ರಾಯಚೂರು ಹಾಗೂ ದೇವದುರ್ಗ ತಾಲೂಕಿನ ತಹಶೀಲ್ದಾರರು, ಜಿಲ್ಲಾ ಅಗ್ನಿ ಶಾಮಕ ದಳದ ಅಧಿಕಾರಿಗಳು, ಜಿಲ್ಲಾಧಿಕಾರಿಗಳ ಕಚೇರಿಯ ಜಿಲ್ಲಾ ವಿಪತ್ತು ಪರಿಣಿತರು, ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತ ಅಧಿಕಾರಿಗಳು ಸೇರಿದಂತೆ ಇತರೆ ಸಂಬಂಧಪಟ್ಟ ಅಧಿಕಾರಿಗಳು ಇದ್ದರು.

## ಕೊಟ್ಟೂರು ಹೋಬಳಿಯಲ್ಲಿ ಭಾರಿ ಮಳೆಗೆ ಸಂಚಾರ ಬಂದ್, ಮನೆಗಳಿಗೆ ಹಾನಿ



ಕೋಗಳಿ–ಕನ್ನಿಹಳ್ಳಿ ಸಂಪರ್ಕ ಸೇತುವೆಗೆ ಜನರು ಓಡಾಡದಂತೆ ಬೇಲಿ

**ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ತಾಲೂಕಿನಲ್ಲಿ ಭಾನುವಾರ ರಾತ್ರಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದ್ದು, ಕೊಟ್ಟೂರು ಹೋಬಳಿಯಲ್ಲಿ 136.4 ಎಂಎಂ ಹಾಗೂ ಕೋಗಳಿ ಹೋಬಳಿಯಲ್ಲಿ 16.6 ಎಂಎಂ ಮಳೆ ಯಾಗಿದೆ ಎಂದು ತಹಶಿಲ್ದಾರ ಅಮರೇಶ ಜಿ.ಕೆ ಹೇಳಿದರು.

ರಾಂಪುರದಲ್ಲಿ–2, ಜೋಳದ ಕೂಡ್ಲಿಗಿಯಲ್ಲಿ–1, ಕಾಳಾಪುರದಲ್ಲಿ–1 ಒಟ್ಟು 4 ಮನೆಗಳು ಬಾಗಶ: ಹಾನಿಯಾಗಿವೆ. ಇಟ್ಟಿಗಿ–ಕೊಟ್ಟೂರು ರಸ್ತೆಯ ರೈಲ್ವೆ ಸೇತುವೆ ಕೆಳಗಡೆಯ ರಸ್ತೆಯಲ್ಲಿ ಹೆಚ್ಚಿನ ನೀರು ನಿಂತು, ವಾಹನಗಳು ಹಾಗೂ ಸಾರ್ವಜನರಿಕರ ಓಡಾಟಕ್ಕೆ ಕೆಲ ಸಮಯ ಅಡಚಣೆಯಾಗಿತ್ತು. ಗಮನಕ್ಕೆ ಬಂದ ತಕ್ಷಣ ಸ್ಥಳಕ್ಕೆ >>4

## ಅಂಚೆ ಇಲಾಖೆಯಿಂದ ಜೂನ್ 26 ರಂದು ಪಿಂಚಣಿ ಅದಾಲತ್

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ವಿಭಾಗೀಯ ಅಂಚೆ ಕಚೇರಿ ವತಿಯಿಂದ ಅಂಚೆ ಇಲಾಖೆ ಮೂಲಕ ಪಿಂಚಣಿ ಪಡೆಯುವ ಪಿಂಚಣಿದಾರರ ಅಹವಾಲು, ದೂರು ಸ್ವೀಕಾರಕ್ಕಾಗಿ ಜೂನ್ 26 ರಂದು ವಿಭಾಗೀಯ ಅಂಚೆ ಕಚೇರಿಯಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಅಂಚೆ ಮೂಲಕ ಪಿಂಚಣಿ ಪಡೆಯುವ ಪಿಂಚಣಿದಾರರು, ಅವಲಂಬಿತರು ಪಿಂಚಣಿ ಅದಾಲತ್‌ನಲ್ಲಿ ಭಾಗವಹಿಸಲು ತಮ್ಮ ದೂರು, ಅಹವಾಲುಗಳನ್ನು ಅಂಚೆ ಮೂಲಕ ಅಂಚೆ ಅಧೀಕ್ಷಕರ ಕಚೇರಿ, ಕೊಪ್ಪಳ ವಿಭಾಗ, ಕೊಪ್ಪಳ-583231 ವಿಳಾಸಕ್ಕೆ ಅಥವಾ ಇ-ಮೇಲ್ ವಿಳಾಸ: dokoppal.ka@indiapost.gov.in ಗೆ ಜೂನ್ 21 ರೊಳಗೆ ಸಲ್ಲಿಸಬೇಕು ಎಂದು ಕೊಪ್ಪಳ ವಿಭಾಗೀಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೊಪ್ಪಳ ವಿವಿ : ಪದವಿ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

2025-26ನೇ ಶೈಕ್ಷಣಿಕ ಸಾಲಿನ ಬಿ.ಎ., ಬಿ.ಕಾಂ., ಬಿ.ಕಾಂ (AEDP), ಬಿ.ಎಸ್ಸಿ, ಬಿ.ಬಿ.ಎ. ಮತ್ತು ಬಿ.ಸಿ.ಎ. ಕೋರ್ಸುಗಳಿಗೆ ಕೊಪ್ಪಳ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ಸಂಯೋಜಿತ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾನೇತರ ಮಹಾವಿದ್ಯಾಲಯಗಳಲ್ಲಿ ಪ್ರಥಮ ವರ್ಷ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

UUCMS (https://uucms.karnataka.gov.in/) ತಂತ್ರಾಂಶದ ಮುಖಾಂತರ ಆಗಸ್ಟ್ 31 ರವರೆಗೆ ಅರ್ಜಿಗಳನ್ನು ಸಲ್ಲಿಸಬಹುದು. ಎಲ್ಲಾ ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗ ಪಡೆಸಿಕೊಂಡು ನಿಗದಿತ ದಿನಾಂಕದ ಒಳಗೆ ಪ್ರವೇಶಾತಿಯನ್ನು ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಕೊಪ್ಪಳ ವಿಶ್ವವಿದ್ಯಾಲಯದ ಜಾಲತಾಣವನ್ನು www.koppaluniversity.ac.in ಅನ್ನು ವೀಕ್ಷಿಸಬಹುದು ಎಂದು ವಿಶ್ವವಿದ್ಯಾಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಂದ ಅಹವಾಲು ಸ್ವೀಕಾರ

■ **ಹಂಪಿ ಟೈಮ್ಸ್ ದಾವಣಗೆರೆ:**

ದಾವಣಗೆರೆ ಘಟಕದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಜೂನ್ 11 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1.30 ರವರೆಗೆ ಹೊನ್ನಾಳಿ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು. ಸಾರ್ವಜನಿಕರು ಸರ್ಕಾರದ ವಿವಿಧ ಇಲಾಖೆಗಳಿಗೆ ಸಲ್ಲಿಸಿದ ಅರ್ಜಿಗಳನ್ನು ಇತ್ಯರ್ಥ ಮಾಡದ ಬಗ್ಗೆ ತಮ್ಮ ದೂರು ಹಾಗೂ ಅಹವಾಲುಗಳನ್ನು ಸಲ್ಲಿಸಬಹುದೆಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಎಂ.ಎಸ್ ಕೌಲಾಪೂರೆ ತಿಳಿಸಿದ್ದಾರೆ.

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.


**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಪರೀಕ್ಷೆ ಮತ್ತು ಮೌಲ್ಯಮಾಪನದ ಘನತೆ ಎತ್ತಿಹಿಡಿಯುವವರಾರು?



ಮಕ್ಕಳನ್ನು ವಿದ್ಯಾವಂತರಾಗಿ ಮಾಡುವುದಕ್ಕೆ ಪಾಲಕರು ಶಾಲೆ-ಕಾಲೇಜುಗಳಿಗೆ ಕಳಿಸುವ ಮೂಲಕ ಬಹುಶಿಸ್ತೀಯ ನೆಲೆಯ ಅಧ್ಯಯನಕ್ಕೆ ತೊಡಗಿ ಕೊಳ್ಳುವಂತೆ ಮಾಡಿದ್ದಾರೆ. ಮಕ್ಕಳಿಗೆ ಮನೆಯೇ ಮೊದಲ ಪಾಠ ಶಾಲೆ; ತಾಯಿಯೇ ಮೊದಲು ಗುರು ಅನ್ನೋ ಪರಂಪರೆಯೊಂದು ಕಲಿಕೆಯನ್ನು ಕಲಿಸುವ ಜೊತೆಗೆ ಶಾಲೆಯ ಕಲಿಕೆಯ ಕೊಂಡಿಯನ್ನು ಸೇರಿಕೊಂಡು ಶಿಕ್ಷಣದ ಅಭಿವ್ಯಕ್ತಿಯನ್ನು ಬಿಗುವಾಗಿ ಹಿಡಿಯುವ ಕಾರ್ಯವನ್ನು ಮಾಡಲಾಗುತಿತ್ತು. ಈಗ ಕಾಲ ಬದಲಾಗಿದೆ ಮಕ್ಕಳಿಗೆ ಮನೆಯಲ್ಲಿ ಸಮಯ ಕೊಡುವುದಕ್ಕೆ ಬಹುತೇಕ ಪೋಷಕರಿಗೆ ಸಮಯ, ತಾಳ್ಮೆಗಳು ಇಲ್ಲ. ಈ ಕಾರಣದಿಂದ ಮೂರು ವರ್ಷಕ್ಕೆ ಮಕ್ಕಳನ್ನು ಶಾಲೆಯ ಪರಿಸರಕ್ಕೆ ಹಾಕಿ ಕಲಿಕೆಯ ಪ್ರಜ್ಞೆಯನ್ನು ಅಪ್ಪಿಕೊಳ್ಳುವಂತೆ ಮಾಡುತ್ತಿರುವುದು ಸಾಮಾನ್ಯವಾಗಿದೆ. ಈ ನಡುವೆ ಶಿಕ್ಷಣ ವ್ಯವಸ್ಥೆಯು ಮುಖ್ಯವಾಗಿ ಪಠ್ಯ, ಬೋಧನೆ, ಪರೀಕ್ಷೆಯನ್ನು ಮಕ್ಕಳ ಅರಿವಿನ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಮತ್ತು ನಿರ್ಧರಿಸುವುದಕ್ಕೆ ನಿಗದಿಪಡಿಸಿದೆ.

ಪರೀಕ್ಷೆ ಮಕ್ಕಳಿಗೆ ಸಂಬಂಧಿಸಿದಾಗಿದ್ದರೆ ಮೌಲ್ಯಮಾಪನವು ಶಿಕ್ಷಕರಿಗೆ ಸೇರಿದ್ದಾಗಿದೆ. ಇಬ್ಬರು ಒಂದು ನಾಣ್ಯದ ಎರಡು ಮುಖದಂತೆ ಇದ್ದರೂ ಇಲ್ಲಿ ತೊಡಕುಗಳಿವೆ. ಶಿಕ್ಷಕರು ರೂಪಿಸಿರುವ ಪ್ರಶ್ನೆಪತ್ರಿಕೆಗಳಿಗೆ ಬಹುತೇಕ ವಿದ್ಯಾರ್ಥಿಗಳು ಸರಿಯಾದ ಉತ್ತರಗಳನ್ನು ಬರೆಯುವುದಕ್ಕೆ ಕಲಿತಿಲ್ಲ ಮತ್ತು ಬರೆಯುವುದೂ ಇಲ್ಲ. ಶಿಕ್ಷಕರು ವಿದ್ಯಾರ್ಥಿಗಳು ಬರೆದ ಉತ್ತರ ಪತ್ರಿಕೆಯನ್ನು ಬಹುತೇಕರು ನ್ಯಾಯ ಬದ್ಧವಾಗಿ ಮೌಲ್ಯಮಾಪನ ಮಾಡುವುದು ತಮ್ಮ ಕರ್ತವ್ಯ ಎನ್ನುವುದನ್ನು ಮರೆತೇ ನಡೆಯುತ್ತಿದ್ದಾರೆ. ಈ ಪ್ರಜ್ಞೆಯು ರೂಪ ಪಡೆಯುವುದಕ್ಕೆ ಕಾರಣವೇನು? ಎನ್ನುವುದನ್ನು ಚಿಂತನೆಗೆ ಒಳಗು ಮಾಡಬೇಕಾದ ಅಗತ್ಯವಿದೆ. ಸಾಮಾನ್ಯವಾಗಿ ವಿದ್ಯಾರ್ಥಿಗಳು ಅನೇಕ ಪರೀಕ್ಷೆಯನ್ನು ಶಾಲೆ-ಕಾಲೇಜಿನ ವಾತಾವರಣದಲ್ಲಿ ಪರಿಚಯ ಮಾಡಿಕೊಂಡಿದ್ದಾರೆ ಮತ್ತು ಬರೆದು ಸ್ವ-ಅನುಭವವನ್ನು ಗಳಿಸಿಲಕೊಂಡಿದ್ದಾರೆ ಆದರೂ ನಿಗದಿಪಡಿಸಿದ ಅಂಕಗಳಿಗೆ ಎಷ್ಟು ಉತ್ತರ ಬರೆಯಬೇಕು ಎನ್ನುವ ಕ್ರಮಬದ್ಧತೆಯನ್ನು ರೂಢಿಸಿಕೊಳ್ಳುವುದರಲ್ಲಿ ಸೋತಿದ್ದಾರೆ ಎನ್ನುವುದು ಲೋಕದ ಸತ್ಯ. ಇದಕ್ಕಿಂತ ವಿದ್ಯಾರ್ಥಿಗಳಲ್ಲಿ ಇರುವ ಭ್ರಮೆ ಅಂದರೆ ಏನಾದ್ರು ಬರೆದರೂ ಅಂಕ ನೀಡುತ್ತಾರೆ, ಪಾಸು ಮಾಡುತ್ತಾರೆ ಮತ್ತು ತಾನು ಬರೆದದ್ದು ಎಲ್ಲವೂ ಸರಿಯಾದ ಉತ್ತರವೇ ಎನ್ನುವ ಧೋರಣೆಗಳು ಪರೀಕ್ಷೆಯ ಅಭಿವ್ಯಕ್ತಿಯನ್ನು ಪಲ್ಲಟಿಸುವಂತೆ ಮಾಡಿದೆ. ಇತ್ತ ಶಿಕ್ಷಕ-ಉಪನ್ಯಾಸಕರು ಎನ್ನಿಸಿಕೊಂಡವರು ವಿದ್ಯಾರ್ಥಿಗಳಿದ್ದಾಗ ಅನೇಕ ಪರೀಕ್ಷೆ ಬರೆದಿದ್ದಾರೆ. ಈಗ ಅದೆಷ್ಟೋ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಸಿದ್ದಾರೆ, ಪಠ್ಯವನ್ನು ಬೋಧನೆಯನ್ನು ಮಾಡಿ ಅನೇಕ ಉತ್ತರ ಪತ್ರಿಕೆಗಳನ್ನು ಮೌಲ್ಯ ಮಾಪನ ಮಾಡಿದ್ದಾರೆ ಆದರೂ ಮೌಲ್ಯಮಾಪನದ ಮೀಮಾಂಸೆಯ ತಿಳುವಳಿಕೆಯನ್ನು ಅಪ್ಪಿಕೊಳ್ಳುವುದರಲ್ಲಿ ಸೋತಿದ್ದಾರೆ ಎನ್ನುವುದು ಅಷ್ಟೇ ಸತ್ಯ.

ಸಾಮಾನ್ಯವಾಗಿ ಶಿಕ್ಷಕರಾದ ನಮ್ಮಲ್ಲಿ ಮೌಲ್ಯಮಾಪನದ ಬಗೆಗೆ ಇರುವ ಧೋರಣೆಗಳೆಂದರೆ ನಾನು ಕಲಿಸಿದ ಮತ್ತು ಕಲಿತ ಉತ್ತರಗಳನ್ನೇ ವಿದ್ಯಾರ್ಥಿಗಳು ಬರೆಯಬೇಕು; ಪಠ್ಯದ ನೆಲೆಯಿಂದ ಓದಿ ಅದನ್ನೇ ಬರೆದಿರಬೇಕು, ಇಲಾಖೆಯು ನಿಗದಿಪಡಿಸಿದ ಉತ್ತರಗಳನ್ನೇ ಬರೆಯಬೇಕು; ಮಗುವಿಗೆ ಅರ್ಥವಾಗಿದ್ದನ್ನು ಅವನ ವಾಕ್ಯದಲ್ಲಿ ಬರೆದರೇ ಸಾಕು; ಏನಾದರೂ ಬರೆಯಲಿ ಪುಟ ತುಂಬಿದ್ದರೆ ಸಾಕು; ಹಳ್ಳಿಯ ಮಕ್ಕಳು ಇರುತ್ತಾರೆ ಅವರ ಭವಿಷ್ಯದ ಬೆಳಗಿದರೆ ಸಾಕು ಇಪ್ಪತ್ತೊಂದು ಕೊಟ್ಟು ಪಾಸು ಮಾಡುವ; ಅಂಕ ಎಷ್ಟಾದರೂ ಬರಲಿ ಅದರ ಚಿಂತೆ ಏಕೆ? ಕೊಟ್ಟ ಉತ್ತರ ಪತ್ರಿಕೆಯ ಬಂಡಲ್‌ಗಳು ಮುಗಿದರೆ ಸಾಕು, ಬಿಲ್ಲಾದರೆ ಕಾರ್ಯ ಮುಗಿಯಿತು ಕಾಸು ಸಿಕ್ಕಿದರೆ ಮೌಲ್ಯಮಾಪನ ಮುಗಿಯಿತು ಅನ್ನೋ ವಿಭಿನ್ನವಾದ ಯೋಚನೆಗಳು ವಿಭಿನ್ನರಲ್ಲಿ ಉಂಟು. ಹೀಗೆ ಆಗುವುದಕ್ಕೆ ಕಾರಣವೇನು? ಎನ್ನುವುದನ್ನು ಪ್ರತಿಯೊಬ್ಬ ಅಧ್ಯಾಪಕರು ಶೋಧಿಸಿಕೊಳ್ಳುವುದು ಅನಿವಾರ್ಯವಾಗಿದೆ.



ಡಾ. ಸುಬ್ರಹ್ಮಣ್ಯ ಸಿ ಕುಂದೂರು
ಮಂಗಳೂರು

Scan For Digital Colourful
HAMPI TIMES E-paper

ಪ್ರತಿವರ್ಷವು ಫಲಿತಾಂಶ ಬಂದ ಕೂಡಲೇ ಅದೆಷ್ಟೋ ವಿದ್ಯಾರ್ಥಿಗಳು ಅನುತ್ತೀರ್ಣರಾದವರು ಮರುಮೌಲ್ಯಮಾಪನಕ್ಕೆ ಹಾಕುತ್ತಾರೆ. ಆಗ ಸರಾಸರಿ ಇಪ್ಪತ್ತು ಅಂಕಗಳು ಹೆಚ್ಚುವರಿಯಾಗಿ ಸಿಕ್ಕಿದ್ದು ಇದೆ. ಟೋಟಲಿನಲ್ಲಿ ವ್ಯತ್ಯಾಸವಾಗಿದ್ದಿದೆ; ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ನಮೂದುಗೊಂಡ ಅಂಕ ಒಂದಾಗಿದ್ದಾರೆ ಒಳಪುಟಗಳಲ್ಲಿ ಇರುವ ಅಂಕ ಇನ್ನೊಂದು ಆಗಿರುತ್ತದೆ; ಉತ್ತರ ಸರಿ ಇದ್ದರು ಶೂನ್ಯ ನೀಡಿದ ಅದೆಷ್ಟೋ ಉದಾಹರಣೆಗಳಿವೆ. ಉತ್ತರ ತಪ್ಪಿದ್ದರೂ ಅಂಕ ನೀಡಿದ ಘಟನೆಗಳಿವೆ ಹೀಗೆ ಅದೆಷ್ಟೋ ವಿಚಾರಗಳನ್ನು ಪಟ್ಟಿ ಮಾಡಬಹುದು ಇಲ್ಲಿ ಮೂಡುವ ಪ್ರಶ್ನೆ ಮಕ್ಕಳ ಭವಿಷ್ಯವನ್ನೇ ಕಟ್ಟುವ ಪರೀಕ್ಷೆಯ ಮೌಲ್ಯಮಾಪನದ ಪ್ರಜ್ಞೆ ಮತ್ತು ಪರಿಸರವು ಹೀಗೆ ಏಕೆ?. ಇಲ್ಲಿ ನಾವು ಗೊಂದಲಕ್ಕೆ ಒಳಗಾಗಿ ಎಡವಿದ್ದು ಎನ್ನುವುದು ನಮ್ಮ ಅರಿವಿಗೆ ದಕ್ಕುತ್ತಿಲ್ಲ.

ಒಬ್ಬ ಅಧ್ಯಾಪಕರನ್ನು ಆಯ್ಕೆ ಮಾಡುವಾಗ ಸಾಮಾನ್ಯವಾಗಿ ನಾವು ಅಂಕಗಳಿಸಿದ ಮಾಹಿತಿ, ಪದವಿಗಳು, ಅವನು ಪಾಠ್ಯವನ್ನು ಬೋಧಿಸುವ ತಿಳುವಳಿಕೆ, ಎಷ್ಟು ವರ್ಷ ಪಾಠ ಮಾಡಿದ್ದಾರೆ ಇತ್ಯಾದಿಯನ್ನು ಗಮನಿಸುತ್ತೇವೆ ಆದರೆ ಅವನು ವಿದ್ಯಾರ್ಥಿಗಳ ಉತ್ತರ ಪತ್ರಿಕೆಯನ್ನು ಹೇಗೆ ಮೌಲ್ಯಮಾಪನ ಮಾಡುತ್ತೇವೆ ಎನ್ನುವುದನ್ನು ಕೇಳುವುದು ಇಲ್ಲ ಆ ವಿಚಾರದ ಬಗ್ಗೆ ನಮ್ಮ ಗಮನವೇ ಇಲ್ಲ ಮತ್ತು ಮೌಲ್ಯಮಾಪನ ಮಾಡುವುದು ಹೇಗೆ ಅದರ ಕ್ರಮಗಳೇನು ಎನ್ನುವುದರ ಕುರಿತ ಯಾವ ತರಬೇತಿಯನ್ನು ನಾವು ಯಾರಿಗೂ ನೀಡುವುದಿಲ್ಲ! ಈ ರೀತಿಯ ಶಿಕ್ಷಣ ವ್ಯವಸ್ಥೆಯ ಪರಿಸರವು ಬಹುಮುಖ್ಯವಾಗಿ ಶಿಕ್ಷಣದ ಗುಣಮಟ್ಟತೆಯನ್ನೇ ಕಳೆದು ಬಿಟ್ಟಿದೆ. ಇನ್ನು ಮುಂದುವರಿದು ಹೇಳುವ ವಿಚಾರ ಅಂದರೆ ಸರ್ಕಾರಗಳು ವಾರ್ಷಿಕವಾಗಿ ಮೂರು ಪರೀಕ್ಷೆಯನ್ನು ನಿಗದಿ ಮಾಡಿದೆ. ಅಲ್ಪ ಸಮಯದಲ್ಲಿ ಮೂರು ಪರೀಕ್ಷೆ ನಡೆಸಬೇಕು, ರಾಜ್ಯದಲ್ಲಿ ಪರೀಕ್ಷೆ ಬರೆಯುವ ಲಕ್ಷಾಂತರ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಕೆಲವು ದಿನಗಳಲ್ಲಿ ಮುಗಿಯಬೇಕು ಅನ್ನುವ ಒತ್ತಡ ಇರುವ ಕಾರಣ ಪಠ್ಯವನ್ನು ಬೋಧಿಸಿದ, ಬೋಧಿಸದ ಸ್ಯಾಸ್ಟ್ ಪೋರ್ಟನಲ್ಲಿ ಹೆಸರು ಇರುವ ಎಲ್ಲ ಅಧ್ಯಾಪಕನಿಗೂ ಮೌಲ್ಯಮಾಪನದ ಆದೇಶವು ಬರುತ್ತಿದೆ. ಇಲ್ಲಿ ಮೂರು ವರ್ಷ ಅನುಭವ ಆಗಿರಬೇಕು ಅನ್ನೋ ನಿಯಮಗಳು ಬದ್ಧವಾಗಿ ಪಾಲನೆ ಆಗುವುದು ಇಲ್ಲ. ಈ ಕಾರಣದಿಂದ ಮೌಲ್ಯಮಾಪನದ ಅರಿವೇ ಇಲ್ಲದ ಅನೇಕರು ಉತ್ತರ ಪತ್ರಿಕೆಯನ್ನು ತಿದ್ದುತ್ತಾರೆ ಇಲ್ಲಿ ತಪ್ಪುಗಳು ಸಹಜವಾಗಿಯೇ ಆಗುತ್ತದೆ ಇಲ್ಲಿ ಹೊಣೆ ಯಾರು? ಯಾರದ್ದು? ಅನ್ನೋದನ್ನು ಚೂರು ಗಟ್ಟಿಯಾಗಿ ಯೋಚಿಸಬೇಕಾಗದೆ.

ವಿದ್ಯಾರ್ಥಿಗಳು ಫೇಲ್ ಆಗಬಾರದು, ಅವರನ್ನು "ನೀನು ಫೇಲ್" ಎಂದು ಹೇಳಬಾರದು. ಅವರ ಮನಸ್ಸು ನೊಂದು ಹೋಗುತ್ತದೆ ಅನ್ನೋ ಧೋರಣೆ ಯಾರವ ತಾರ್ಕಿತೆಯೂ ಇಲ್ಲ ಕೆಲವು ನಿಯಮಗಳನ್ನು ರೂಪಿಸಿದೆ. ಇನ್ನು ಮುಂದೆ ಈ ಮೌಲ್ಯಮಾಪನವನ್ನು ಅಧ್ಯಾಪಕರು ಮಾಡುವುದು ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆ ಆಗುತ್ತದೆ ಅನ್ನೋ ಆಲೋಚನೆ ಸರ್ಕಾರಕ್ಕೆ ಅಥವಾ ಶಿಕ್ಷಣದ ಪರಿಕಲ್ಪನೆಯನ್ನು ರೂಪಿಸುವ ಬುದ್ಧಿ ಜೀವಿಗಳಿಗೆ ಹೊಳೆದು ಬಿಟ್ಟರೆ ಮೌಲ್ಯಮಾಪನವು ತಾಂತ್ರಿಕ ವ್ಯವಸ್ಥೆಯ ಮೂಲಕ ನಿರ್ವಹಿಸಲು ಪ್ರಾರಂಭವಾದರೆ ಅಧ್ಯಾಪಕರು ಎನಿಸಿಕೊಂಡ ಪ್ರತಿಯೊಬ್ಬರು ಮೌಲ್ಯಮಾಪನದ ಸುಖವನ್ನು ಕಳೆದುಕೊಳ್ಳ ಬೇಕಾಗುತ್ತದೆ ಎನ್ನುವುದು ಮುಂದಿನ ದಿನದ ಸತ್ಯವಾಗಿದೆ. ಈ ಎಲ್ಲ ಅರಿವನ್ನು ಗಮನದಲ್ಲಿ ಇಟ್ಟುಕೊಂಡು ಸರ್ಕಾರ, ಇಲಾಖೆ, ಅಧ್ಯಾಪಕರು ಪರೀಕ್ಷೆ ಮತ್ತು ಮೌಲ್ಯಮಾಪನದ ಪರಿಸರವನ್ನು ಸುಧಾರಿಸುವ ಕಡೆಗೆ ಯೋಚಿಸಬೇಕು, ಮನುಷ್ಯ ತಪ್ಪು ಮಾಡುವುದು ಸಹಜ ಆದರೆ ತಪ್ಪನ್ನೇ ಪ್ರತಿಸಾರಿ ಮಾಡಿಕೊಂಡು ಮೌಲ್ಯಮಾಪನದ ಘನತೆಯನ್ನು ಕಳೆಯುವುದು ತಪ್ಪು ಅನ್ನೋದನ್ನು ನಾವು ಚಿಂತಿಸಬೇಕು.

# ಕಾಲ್ತುಳಿತ ಪ್ರಕರಣ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ

## ವಿಧಾನಸೌಧದ ಆವರಣದಲ್ಲಿ ಯಾವುದೇ ಅಹಿತಕರ ಘಟನೆ ನಡೆದಿಲ್ಲ: ಸಿ.ಎಂ.ಸಿದ್ದರಾಮಯ್ಯ

■ **ಹಂಪಿ ಟೈಮ್ಸ್ ಮೈಸೂರು**

ಆರ್ ಸಿ ಬಿ ಸಂಭ್ರಮಾಚರಣೆಯಲ್ಲಿ ನಡೆದ ಕಾಲ್ತುಳಿತ ಪ್ರಕರಣದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ರಾಜಕೀಯ ಪ್ರೇರಿತ ಆರೋಪಗಳನ್ನು ಮಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಮೈಸೂರಿನ ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು.



ಬಿಜೆಪಿಯವರು ರಾಜಕೀಯ ಪ್ರೇರಿತವಾಗಿ ಆರೋಪಗಳನ್ನು ಮಾಡುತ್ತಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಮೇಲ್ನೋಟಕ್ಕೆ ಕಂಡು ಬರುವ ಮಾಹಿತಿ ಆಧರಿಸಿ ಸಂಬಂಧಪಟ್ಟ ಪೊಲೀಸರ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಬಿಜೆಪಿ ಹಾಗೂ ಜೆಡಿಎಸ್ ನವರ ಬೇಡಿಕೆಯಂತೆ ನ್ಯಾಯಾಂಗ ತನಿಖೆಗೆ ಆದೇಶ ಮಾಡಲಾಗಿದೆ ಎಂದರು. ಅಂತೆಯೇ ಪೊಲೀಸರ ಮೇಲೆಯೂ ಕ್ರಮ ಕೈಗೊಳ್ಳಲಾಗಿದೆ. ಕಾರ್ಯಕ್ರಮ ಆಯೋಜನೆಗೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಇಲಾಖೆ ಷರತ್ತುಬದ್ಧ ಅನುಮತಿ ನೀಡಲಾಗಿತ್ತು ಎಂದು ತಿಳಿಸಿದರು.

**ಕಾರ್ಯಕ್ರಮಕ್ಕೆ ಷರತ್ತುಬದ್ಧ ಅನುಮತಿ**

ವಿಧಾನಸೌಧದ ಭದ್ರತೆಯ ದೃಷ್ಟಿಯಿಂದ ಕಾರ್ಯಕ್ರಮ ನಡೆಸದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದ ಬಗ್ಗೆ ಪ್ರತಿಕ್ರಿಯೆ ನೀಡಿ, ಡಿಪಿಎಆರ್ ನಿಂದ ಷರತ್ತುಬದ್ಧ ಅನುಮತಿ ನೀಡಲಾಗಿತ್ತು. ಷರತ್ತುಗಳನ್ನು ಪಾಲಿಸಿ , ಕಾರ್ಯಕ್ರಮವನ್ನು ಆಯೋಜಿಸುವುದು ಪೊಲೀಸರ ಕರ್ತವ್ಯವಾಗಿತ್ತು. ಈ ಅನುಮತಿ ವಿಧಾನಸೌಧದ ಕಾರ್ಯಕ್ರಮಕ್ಕೆ ಸಂಬಂಧಿಸಿದ್ದು, ವಿಧಾನಸೌಧದ ಆವರಣದಲ್ಲಿ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಚಿನ್ನಸ್ವಾಮಿ ಕ್ರೀಡಾಂಗಣದ ಕಾರ್ಯಕ್ರಮದಲ್ಲಿ ಕಾಲ್ತುಳಿತ ಘಟನೆ ಸಂಭವಿಸಿದೆ. ಪೊಲೀಸರು ಸಮರ್ಪಕವಾಗಿ ಇಲ್ಲಿ ಭದ್ರತೆ ಒದಗಿಸಬೇಕಿತ್ತು. ಆದರೆ ಪೊಲೀಸ್ ವ್ಯವಸ್ಥೆ ಸಮರ್ಪಕವಾಗಿರದಿದ್ದ ಕಾರಣ, ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿದೆ ಎಂದರು.

**ಕಾಲ್ತುಳಿತದ ಘಟನೆ ಸರ್ಕಾರಕ್ಕೆ ನೋವು ತಂದಿದೆ**

ಕಾರ್ಯಕ್ರಮದ ಸ್ಥಳದಲ್ಲಿ ಪೊಲೀಸ್ ಭದ್ರತಾ ವ್ಯವಸ್ಥೆ ಬಗ್ಗೆ ಪೊಲೀಸ್ ಇಲಾಖೆಯಿಂದ ಸಮಗ್ರ ಮಾಹಿತಿ ಕೊಟ್ಟಿರಲಿಲ್ಲ. ಚಿನ್ನಸ್ವಾಮಿ ಕ್ರೀಡಾಂಗಣದ ಸರ್ಕಾರಿ ಕಾರ್ಯಕ್ರಮವಾಗಿರಲಿಲ್ಲ ಹಾಗೂ ಇದಕ್ಕೆ ನನಗೆ ಆಹ್ವಾನವೂ ಇರಲಿಲ್ಲ. ಬಿಜೆಪಿ ಹಾಗೂ ಜೆಡಿಎಸ್ ನವರು ರಾಜಕೀಯ ಪ್ರೇರಿತ ಹೇಳಿಕೆ ನೀಡುತ್ತಿದ್ದಾರೆ. ಮಧ್ಯಾಹ್ನ 3.50 ಕ್ಕೆ ಗಾಯಗೊಂಡವರು ಆಸ್ಪತ್ರೆಯಲ್ಲಿ ದಾಖಲಾಗಿದ್ದರೂ, ನನಗೆ ಸಂಜೆ 5.45 ಕ್ಕೆ ಕ್ರೀಡಾಂಗಣದ ಬಳಿ ಕಾಲ್ತುಳಿತ ಉಂಟಾಗಿ, ಜನರು ಮೃತಪಟ್ಟಿರುವ ಮಾಹಿತಿ ದೊರೆಯಿತು. ಕಾಲ್ತುಳಿತದ ಘಟನೆ ಘಟಿಸಬಾರದಿತ್ತು. ಬಹಳ ಬೇಸರ ತಂದಿದೆ ಎಂದರು.

**ಕ್ರೀಡಾಂಗಣ ಸ್ಥಳಾಂತರದ ಬಗ್ಗೆ ಪರಿಶೀಲಿಸಿ ತೀರ್ಮಾನ**

ಕಡಿಮೆ ಸಾಮರ್ಥ್ಯವಿರುವ ಕ್ರಿಕೆಟ್ ಕ್ರೀಡಾಂಗಣವನ್ನು ಬೇರೆಡೆಗೆ ಸ್ಥಳಾಂತರಿಸುವ ಬಗ್ಗೆ ಸರ್ಕಾರ ಗಮನಹರಿಸಿದೆಯೇ ಎಂಬ ಬಗ್ಗೆ ಪ್ರತಿಕ್ರಿಯೆ ನೀಡಿ, ಈ ವಿಷಯ ಸರ್ಕಾರ ಪರಿಶೀಲಿಸಲಿದೆ. ಯಾವ ಸರ್ಕಾರದ ಅವಧಿಯಲ್ಲಿಯೂ ಇಂತಹ ಅಹಿತಕರ ಘಟನೆ ನಡೆಯಬಾರದು. ವೈಯಕ್ತಿಕವಾಗಿ ಈ ಘಟನೆ ಸರ್ಕಾರಕ್ಕೆ ನೋವು ತಂದಿದೆ ಎಂದರು.

**ಕಾಲ್ತುಳಿತ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ**

ಈ ಪ್ರಕರಣದಲ್ಲಿ ಪೊಲೀಸರನ್ನು ಬಲಿಪಶು ಮಾಡಲಾಗಿದೆ ಎಂದು ಸಮಾಜಿಕ ಜಾಲತಾಣಗಳಲ್ಲಿ ಕೂಗೆದ್ದಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಪೊಲೀಸ್ ಇಲಾಖೆಯ ಐದು ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿದೆ. ಗುಪ್ತಚರ ಮುಖ್ಯಸ್ಥರನ್ನು ಹಾಗೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳನ್ನು ಬದಲಾಯಿಸಲಾಗಿದೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಸೂಕ್ತ ಕ್ರಮಕೈಗೊಳ್ಳಲಾಗಿದೆ. ಸರ್ಕಾರ ತಪ್ಪು ಮಾಡಿಲ್ಲ, ಘಟನೆ ದು:ಖ ತಂದಿದೆ ಎಂದರು. >>4


Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

**ಕವಿ ಮನಸು**

## ನಂಬಿರುವೆ ತಂದೆ

ಎಲ್ಲ ತಪ್ಪುಗಳನೊಮ್ಮೆ
ಕ್ಷಮಿಸಿ ಬಿಡು ದೇವಾ
ಹೃದಯವು ಹಗುರಾಗಿ
ನಸುನಗಲಿ ಜೀವಾ.

ಅತೀ ಆಸೆ ಮಾಡಿ ನಾ
ಎಲ್ಲ ಕಳಕೊಂಡೆ
ಸಮಯ ಒಂದನು ಬಿಟ್ಟು
ಮರಳಿ ಕೊಡು ತಂದೆ.

ಓದಬೇಕೆಂದು ನಾ
ಪುಸ್ತಕವನು ಕೊಂಡೆ
ಮನಸು ಕಳೆದ್ಹೋಗಿದೆ
ಹುಡುಕಿ ಕೊಡು ತಂದೆ.

ನೂರು ಕನಸನು ಕಂಡು
ನನಸು ಆಗದೆ ಸೋತೆ
ಕನಸು ಕಾಣೋದು ತಪ್ಪೇ?
ತೋರು ನನಸಿನ ರಸ್ತೆ.

ಕಷ್ಟ ನಷ್ಟದ ಹಾದಿ
ನಸುನಗುತ ದಾಟಿದೆ
ಸುಖದ ಹಾದಿಯಲಿನ್ನು
ನಾ ನಡೆಯಬೇಕಿದೆ.

**– ರಮೇಶ. ಶಂ. ಮಂಟೂರ**
ಮುಳವಾಡ. ಜಿ–ವಿಜಯಪುರ.

## ಮುಂಜಾನೆ ಬೆರಗು

ಮೊಮ್ಮಗಳು ಚಂದದಲಿ
ಬಿಡಿಸಿರುವ ಚಿತ್ರವನು
ನೋಡಿರುವ ತಾತನಿಗೆ ಮನದೆ ಬೆರಗು
ಗಿರಿಯ ಸಾಲಿನ ನಡುವೆ
ಬೆಳಕು ಚೆಲ್ಲಿದ ರವಿಯು
ಹೊಸದಿನದ ಮುನ್ನುಡಿಯ ಬರೆದ ಬೆಳಗು

ಅಂಬರವ ಚುಂಬಿಸಲು
ತಲೆ ಎತ್ತಿ ನಿಂತಿರುವ
ಗಿಡಮರಕೆ ಉಲ್ಲಾಸ ತಂದ ಬೆಳಗು
ಹಿಮಮಣಿಯು ಆವರಿಸಿ
ಗಿರಿಯನ್ನು ಮರೆಮಾಡಿ
ಮೆರೆಯುತಿಹ ದೃಶ್ಯವಿದು ಪ್ರಕೃತಿ ಸೊಬಗು

ಹೊಂಗಿರಣ ಸೋಕಿರಲು
ಮರೆಯಾಗಿ ಕಾರಿರುಳು
ಧರೆಯಲ್ಲಿ ಚೈತನ್ಯ ತಂದ ಬೆಳಗು
.ಇಬ್ಬನಿಯು ತಾ ಕರಗಿ
ಎಲೆಗಳಲಿ ಮುತ್ತುಗಳು
ಹೊಸತನದ ಮೆರುಗನ್ನು ಕಂಡು ಬೆರಗು॥

**– ಪೆರ್ಮುಖ ಸುಬ್ರಹ್ಮಣ್ಯ ಭಟ್**

**ಜಾಗತಿಕವಾಗಿ ಪ್ರತಿ ವರ್ಷ ಬಾಲ್ಯ ವಿವಾಹದಿಂದ ದಿನಕ್ಕೆ 60 ಕ್ಕೂ ಹೆಚ್ಚು ಹುಡುಗಿಯರು ಬಲಿಯಾದರೆ. ದಕ್ಷಿಣ ಏಷ್ಯಾದಲ್ಲಿ ಆರು ಹುಡುಗಿಯರು ಬರೆಯಾಗುತ್ತಾರೆ. ಅಂತಾರಾಷ್ಟ್ರೀಯ ಬಾಲಕಿಯರ ದಿನದಂದು ಬಿಡುಗಡೆ ಯಾದ ಸೇವ್ ದಿ ಚಿಲ್ಡ್ರನ್ ಸಂಸ್ಥೆಯ ಹೊಸ ವಿಶ್ಲೇಷಣೆಯ ಪ್ರಕಾರ, ವರ್ಷಕ್ಕೆ ಅಂದಾಜು 22,000 ಕ್ಕೂ ಹೆಚ್ಚು ಹುಡುಗಿಯರು ಬಾಲ್ಯ ವಿವಾಹದ ಪರಿಣಾಮವಾಗಿ ಗರ್ಭಧಾರಣೆ ಮತ್ತು ಹೆರಿಗೆಯಿಂದ ಸಾಯುತ್ತಿದ್ದಾರೆ**

# ಬಾಲ್ಯ ವಿವಾಹ ನಿಲ್ಲಿಸಿ, ಬಾಳಿನ ಹಕ್ಕು ಉಳಿಸಿ

ಇತ್ತೀಚಿಗೆ ರಾಜ್ಯದ್ಯಂತ ಮಾಧ್ಯಮಗಳಲ್ಲಿ ಬಾಲ್ಯ ವಿವಾಹ ಮಾಡಲು ಪ್ರಯತ್ನಿಸಿದ ವಿಡಿಯೋ ಒಂದು ವೈರಲಾಗುತ್ತಿದ್ದಂತೆ ಅತಿ ಸುದ್ದಿಯಾಗಿತ್ತು. ಅಂದಹಾಗೆ ಇದು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಗ್ರಾಮ ಒಂದರಲ್ಲಿ 8ನೇ ತರಗತಿ ವಿದ್ಯಾರ್ಥಿನಿಯನ್ನು ಸೋದರ ಮಾವನಿಗೆ ವಿವಾಹ ಮಾಡಲು ಮುಂದಾಗಿ ಪೋಷಕರು ಪೊಲೀಸರಿಗೆ ಅತಿಥಿಯಾಗಿದ್ದಾರೆ!



ಬಾಲ್ಯ ವಿವಾಹ ಎಂಬುದು ಬೆಳೆಯುವ ಕುಡಿಯನ್ನ ಆರಂಭದಲ್ಲಿ ಚಿವುಟಿ ಹಾಕಿ ಅದರ ಭವಿಷ್ಯವನ್ನು ಕತ್ತಲ ಸೆರೆಮನೆಗೆ ದೂಡಿದಂತೆ. ಪ್ರಾಚೀನ ಕಾಲದಿಂದಲೂ ಬಾಲ್ಯ ವಿವಾಹವೆಂಬುದು ನಮ್ಮ ಸಮಾಜಕ್ಕೆ ಅಂಟಿದ ಅತ್ಯಂತ ದೊಡ್ಡ ಪಿಡುಗು ಮತ್ತು ಶಾಪವಾಗಿ ಪರಿಣಮಿಸಿದೆ.

ಬಾಲ್ಯ ವಿವಾಹ ನಮ್ಮ ಸಮಾಜದಲ್ಲಿ ಆರಂಭಗೊಳ್ಳಲು ಐತಿಹಾಸಿಕ ಹಿನ್ನೆಲೆಗಳನ್ನು ಹೊಂದಿದೆ. ವೇದಗಳು ಮತ್ತು ಸ್ಮೃತಿಕಾಲದಲ್ಲಿ ಎಂಟು ತುಂಬುವ ಪೂರ್ವದಲ್ಲಿ ವಿವಾಹ ವಾಗಬೇಕು ಎಂಬ ನಂಬಿಕೆ ಇತ್ತು."ಕನ್ಯಾ ವೈ ವಸಂತಸ್ಯಾ" ಎಂಬ ಶ್ಲೋಕದಂತೆ, ಬಾಲಕಿ ತನ್ನ ಯೌವನದ ಮೊದಲ ವಸಂತದಲ್ಲಿಯೇ ವಿವಾಹವಾಗಬೇಕು ಎಂಬ ನಿಲುವು ಬಲವಾಗಿತ್ತು. ಮಧ್ಯ ಯುಗೀನ ಭಾರತೀಯ ಇತಿಹಾಸದಲ್ಲಿ ಮುಸ್ಲಿಮರ ಅಕ್ರಮಣ ಮತ್ತು ಅತ್ಯಾಚಾರ ದಂತಹ ದೌರ್ಜನ್ಯಗಳಿಂದ ತಮ್ಮ ಮನೆಯ ಹೆಣ್ಣು ಮಕ್ಕಳನ್ನು ರಕ್ಷಿಸಿಕೊಳ್ಳಲು ಹಿಂದೂ ಕುಟುಂಬಗಳು ತಮ್ಮ ಹೆಣ್ಣು ಮಕ್ಕಳನ್ನು ಶೀಘ್ರವಾಗಿ ವಿವಾಹ ಮಾಡುತ್ತಿದ್ದರು.

ಅಂದು ಅನಿವಾರ್ಯ ಕಾರಣಗಳಿಂದ ಆರಂಭಗೊಂಡ ಬಾಲ್ಯ ವಿವಾಹವು ಒಂದು ಧಾರ್ಮಿಕ ಪರಂಪರೆಯಂತೆ ಈಗಲೂ ಮುಂದುವರೆದುಕೊಂಡು ಬಂದಿರುವುದು ನಮ್ಮ ಭಾರತೀಯ ಸಮಾಜಕ್ಕೆ ಅತಿ ದೊಡ್ಡ ಕಪ್ಪು ಚುಕ್ಕೆಯಾಗಿ ಪರಿಣಮಿಸಿದೆ.

"ಆಡುವ ಮಗುವಿಗೊಂದು ಕಾಡುವ ಕೂಸು" ಎನ್ನುವ ಹಾಗೆ ವಿವಾಹದ ಅರ್ಥ ತಿಳಿಯದ ವಯಸ್ಸಿಗೆ ವೈವಾಹಿಕ ಜೀವನದ ಕೂಪಕ್ಕೆ ಬಿದ್ದ ಎಳೆಯ ಮಗು ಮತ್ತು ಮುಗ್ಧ ಮನಸ್ಸಿಗೆ ಅರ್ಥಮಾಡಿಕೊಳ್ಳುವ ಹೊತ್ತಿಗೆ ತೊಡೆಯ ಮೇಲೊಂದು, ಕಂಕುಳಲ್ಲಿ ಮತ್ತೊಂದು ಜೊತೆಗೆ ಕುಟುಂಬದ ನಿರ್ವಹಣೆ ಭಾರ ಆ ಮಗು ಅದನ್ನು ತಡೆದುಕೊಂಡು ಹೇಗೆ ತಾನೆ ಎಳೆದೀತು ಜೀವನದ ದಡ ಸೇರೀತು?

ಕಳೆದೆರಡು ವರ್ಷಗಳ ಹಿಂದೆ ಮತಗಟ್ಟೆ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಸಮಯವದು, ಒಂದು ಮಹಿಳೆ ಕಂಕಳಲ್ಲೊಂದು ಮಗುವನ್ನೆತ್ತಿಕೊಂಡು ಮತ್ತೊಂದನ್ನು ಜೊತೆಯಲ್ಲಿ ಕರೆದುಕೊಂಡು ಬಂದಿದ್ದರು. ನನ್ನ ಬಳಿ ಬಂದು ಸರ್ ವೋಟ್ ಲಿಸ್ಟ್ ಮಾಡಿಸಬೇಕಿತ್ತು ಎಂದು ಕೇಳಿದರು? ಹೌದಾ ಹಾಗಾದರೆ ನಿಮ್ಮ ಆಧಾರ್ ಕಾರ್ಡ್ ಕೊಡಿ ಎಂದು ಕೇಳಿದೆ ನೋಡಿದರೆ ಶಾಕ್ ಆಗಿತ್ತು! ಏಕೆಂದರೆ 17 ವರ್ಷ 6 ತಿಂಗಳಾಗಿತ್ತು, ಮತದಾರರಿಗೆ ವಯಸ್ಸು ಕನಿಷ್ಠ 18 ವರ್ಷ ಇರಬೇಕು. ಅದಲ್ಲ ಪ್ರಶ್ನೆ? ಹದಿ ನೆಂಟೆ ತುಂಬಿಲ್ಲ ಕಂಕುಳಲ್ಲೊಂದು, ಜೊತೆಯ ಲ್ಲೊಂದು, ಎರಡು ಮಕ್ಕಳು ಹೆಂಗಮ್ಮ ಅಂತ ಕೇಳಿದ್ರೆ ಇಲ್ಲ ಸರ್ ಮನೆಯ ತೊಟ್ಟಿಲಲ್ಲಿ ಇನ್ನೊಂದ್ ಸಣ್ಣ ಮಗುನ ಬಿಟ್ಟು ಬಂದೀನಿ ಸರ್ ಅನ್ನುವ ಉತ್ತರ ಬೇರೆ... ನನಗೆ ಏನು ಮಾತನಾಡಬೇಕು ಅನ್ನೋದೇ ತೋಚದೆ ಯಾಕಮ್ಮ ಚಿಕ್ಕ ವಯಸ್ಸಿಗೆ ಮದುವೆಯಾದೆ? ಓದಿಲ್ವಾ? ಅಂತ ಕೇಳಿದ್ರೆ ಏಳನೇ ತರಗತಿ ಓದು ಮುಗಿದ ತಕ್ಷಣವೇ ನಮ್ಮಪ್ಪ ಅಮ್ಮ ಎಷ್ಟು ಹೇಳಿದ್ರು ಕೇಳದೆ ಮದುವೆ ಮಾಡಿಬಿಟ್ರು ಸರ್ ಎನ್ನುವ ಉತ್ತರ. ನನಗೆ ಅವಳ ಮಾತು ಕೇಳಿ ತುಂಬಾ ಖೇದಕರವಾಯಿತು. ನನಗೆ ಏನು ಹೇಳಬೇಕು ತೋಚದೆ ಇನ್ನು ಆರು ತಿಂಗಳ ನಂತರ ನಿಮಗೆ ವೋಟಿಂಗ್ ಕಾರ್ಡ್ ಬರುತ್ತೆ ಆಗ ಬನ್ನಿ ಎಂದು ಹೇಳಿ ಕಳುಹಿಸಿದೆ.



ಶಿವಣ್ಣ ಗಾಣಗಟ್ಟೆ
ಶಿಕ್ಷಕರು

Scan For Digital Colourful
HAMPI TIMES E-paper

ಇದಾಗಿ ಒಂದು 8 ರಿಂದ 10 ದಿನಗಳು ಕಳೆದಿರಬೇಕು, ಆಗ ತಾನೆ ದಿನಪತ್ರಿಕೆ ಓದಿ ತಿಂಡಿ ತಿನ್ನಲು ಕುಳಿತಿದ್ದೆ. ಅದೇ ಊರಿನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅತಿಥಿ ಶಿಕ್ಷಕರು ನನಗೆ ಕರೆ ಮಾಡಿ ಸರ್ ಮೊನ್ನೆ ವೋಟಿಂಗ್ ಕಾರ್ಡ್ ಮಾಡಿಸಲು ನಿಮ್ಮ ಬಳಿ ಬಂದಿದ್ರಲ್ಲ ಆ ಹುಡುಗಿ ನೇಣಿಗೆ ಶರಣಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಸರ್ ಎಂಬ ಮಾತು ಕೇಳಿ ನನಗೆ ಎದೆ ಹೊಡೆದಂತಾಯಿತು!

ಬಾಲ್ಯ ವಿವಾಹದ ಬಾರಕ್ಕೇ, ಒತ್ತಡದ ಬದುಕಿಗೆ, ಎದುರಾಗುವ ಸೋಲು, ಸವಾಲು, ನೋವು, ಜಂಜಾಟ ಗಳಿಗೆ ಎದೆ ಕೊಟ್ಟು ಎದುರಿಸುವ ಗಟ್ಟಿತನ ಇರದ ವಯಸ್ಸಿನಲ್ಲಿ ಅಂತಿಮ ಪರಿಹಾರವಾಗಿ ಆತ್ಮಹತ್ಯೆಯನ್ನಪ್ಪಿ ಕೊಂಡು ಉಳಿದು ಬಾಳಬೇಕಾದ ಜೀವ ಸಾವಿನ ಮನೆ ಸೇರಿಬಿಡುತ್ತದೆ!

ಎಳೆಯ ವಯಸ್ಸಿಗೆ ಬದುಕಿನ ಒತ್ತಡಗಳನ್ನು ಎದುರಿಸಲಾಗದ ಕಾರಣ ಒಂದಾದರೆ ಗರ್ಭಿಣಿಯಾಗಿದ್ದಾಗ ಮತ್ತು ಹೆರಿಗೆ ಸಮಯದಲ್ಲಿ ಪ್ರಾಯಕ್ಕೆ ಬಾರದ ದೇಹ ಸಂತಾನೋತ್ಪತ್ತಿಗೆ ಸಿದ್ಧಗೊಳ್ಳುವ ಸಂದರ್ಭದಲ್ಲಿ ಎದುರಾಗುವ ಮಾರಣಾಂತಿಕ ಸಮಸ್ಯೆಗಳಿಗೆ ಬದುಕು ಆರಂಭಿಸುವ ಮುನ್ನವೇ ಹಲವರ ಪ್ರಾಣ ಪಕ್ಷಿಯು ಹಾರಿ ಹೋಗುತ್ತದೆ.

ಜಾಗತಿಕವಾಗಿ ಪ್ರತಿ ವರ್ಷ ಬಾಲ್ಯ ವಿವಾಹದಿಂದ ದಿನಕ್ಕೆ 60 ಕ್ಕೂ ಹೆಚ್ಚು ಹುಡುಗಿಯರು ಬಲಿಯಾದರೆ. ದಕ್ಷಿಣ ಏಷ್ಯಾದಲ್ಲಿ ಆರು ಹುಡುಗಿಯರು ಬರೆಯಾಗುತ್ತಾರೆ.

ಅಂತಾರಾಷ್ಟ್ರೀಯ ಬಾಲಕಿಯರ ದಿನದಂದು ಬಿಡುಗಡೆ ಯಾದ ಸೇವ್ ದಿ ಚಿಲ್ಡ್ರನ್ ಸಂಸ್ಥೆಯ ಹೊಸ ವಿಶ್ಲೇಷಣೆಯ ಪ್ರಕಾರ, ವರ್ಷಕ್ಕೆ ಅಂದಾಜು 22,000 ಕ್ಕೂ ಹೆಚ್ಚು ಹುಡುಗಿಯರು ಬಾಲ್ಯ ವಿವಾಹದ ಪರಿಣಾಮವಾಗಿ ಗರ್ಭಧಾರಣೆ ಮತ್ತು ಹೆರಿಗೆಯಿಂದ ಸಾಯುತ್ತಿದ್ದಾರೆ.

ವಿಶ್ವದಲ್ಲೇ ಅತಿ ಹೆಚ್ಚು ಬಾಲ್ಯ ವಿವಾಹ ಪ್ರಮಾಣ ಹೊಂದಿರುವ ಪಶ್ಚಿಮ ಮತ್ತು ಮಧ್ಯ ಆಫ್ರಿಕಾ, ಜಾಗತಿಕವಾಗಿ ಅಂದಾಜು ಮಾಡಲಾದ ಬಾಲ್ಯ ವಿವಾಹ ಸಂಬಂಧಿತ ಸಾವುಗಳಲ್ಲಿ ಅರ್ಧದಷ್ಟು (9,600) ಅಥವಾ ದಿನಕ್ಕೆ 26 ಸಾವುಗಳಿಗೆ ಕಾರಣವಾಗಿದೆ. ಪ್ರಾದೇಶಿಕ ಹದಿಹರೆಯದ ತಾಯಂದಿರ ಮರಣ ಪ್ರಮಾಣವು ಜಗತ್ತಿನ ಬೇರೆಡೆಗಿಂತ ನಾಲ್ಕು ಪಟ್ಟು ಹೆಚ್ಚಾಗಿದೆ. ದಕ್ಷಿಣ ಏಷ್ಯಾದಲ್ಲಿ ಪ್ರತಿ ವರ್ಷ 2,000 ಬಾಲ್ಯ ವಿವಾಹ ಸಂಬಂಧಿತ ಸಾವುಗಳು ಸಂಭವಿಸುತ್ತವೆ.

ಕಳೆದ 25 ವರ್ಷಗಳಲ್ಲಿ ಜಾಗತಿಕವಾಗಿ ಸುಮಾರು 80 ಮಿಲಿಯನ್ ಬಾಲ್ಯವಿವಾಹಗಳನ್ನು ತಡೆಗಟ್ಟಲಾಗಿದ್ದರೂ, COVID–19 ಸಾಂಕ್ರಾಮಿಕ ರೋಗಕ್ಕೂ ಮುಂಚೆಯೇ ಬಾಲ್ಯ ವಿವಾಹದ ನಿಯಂತ್ರಣದ ಪ್ರಯತ್ನ ಹೆಚ್ಚು ಪ್ರಗತಿದಾಯಕವಾಗಿತ್ತು.

2019ರ ಕೊವಿಡ್ ಪಿಡುಗಿನ ನಂತರ ಲಾಕ್ಡೌನ್, ಬಡತನ, ಶಾಲೆ ಮುಚ್ಚುವುಕೆ, ಮುಂತಾದವುಗಳ ಕಾರಣಗಳಿಂದ ಬಾಲ್ಯ ವಿವಾಹದ ಪ್ರಮಾಣ ಮತ್ತೆ ಹೆಚ್ಚಾಗಿದೆ. covid ಪಿಡುಗಿನ ಸಂದರ್ಭದಲ್ಲಂತೂ ಹಳ್ಳಿ ಹಳ್ಳಿಗಳಲ್ಲಿ ಖರ್ಚಿಲ್ಲದ ಮದುವೆ, ಜನ ಸೇರುವ ಜರೂರು ಇಲ್ಲ ಎಂದು ಸಣ್ಣ ಸಣ್ಣ ಮಕ್ಕಳಿಗೆ ಮದುವೆ ಮಾಡಿ ಅವರ ಬಾಳನ್ನೇ ಹಾಳು ಮಾಡಿದರು.

ಇತ್ತೀಚಿನ ಒಂದು NGO ಸಂಸ್ಥೆಯ ವರದಿಯ ಪ್ರಕಾರ ದಿನವೊಂದಕ್ಕೆ ದೇಶದಲ್ಲಿ 4400 ಬಾಲ್ಯವಿವಾಹಗಳು ನಡೆಯುತ್ತವೆ. ಪ್ರತಿ ನಿಮಿಷಕ್ಕೆ ಮೂರು ಬಾಲ್ಯ ವಿವಾಹಗಳು ನಡೆದರೆ ದಿನವೊಂದಕ್ಕೆ ದಾಖಲಾಗುವ ಪ್ರಕರಣಗಳು ಮಾತ್ರ ಮೂರು.

ದೇಶದಲ್ಲಿ ಬಾಲ್ಯ ವಿವಾಹವನ್ನು ತಡೆಯಲು ಬಾಲ್ಯ ವಿವಾಹ ನಿಷೇಧ ಕಾಯ್ದೆ (PCMA) ಕಾಯ್ದೆ ಜಾರಿಗೆ ತಂದಿದೆ. ಈ ಕಾಯಿದೆಯಡಿಯಲ್ಲಿ, ಮದುವೆಗೆ ಕಾನೂನುಬದ್ಧ ವಯಸ್ಸನ್ನು ಮಹಿಳೆಯರಿಗೆ 18 ಮತ್ತು ಪುರುಷರಿಗೆ 21 ಎಂದು ನಿಗದಿಪಡಿಸಲಾಗಿದೆ. ಈ ಕಾಯ್ದೆಯನ್ನು ಉಲ್ಲಂಘಿಸಿದ ತಂದೆ ತಾಯಿಗಳು ಮತ್ತು ಪೋಷಕರಿಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುವುದು.

ಇಷ್ಟೆಲ್ಲ ಕಾಯ್ದೆ ಕಾನೂನುಗಳು ಜಾರಿಗೆ ತಂದಿದ್ದರು ಸಾಂಸ್ಕೃತಿಕ ರೂಢಿಗಳು, ಅನಕ್ಷರತೆ, ಬಡತನ, ಕಾಯ್ದೆ ಕಾನೂನುಗಳ ಅರಿವಿಲ್ಲದಿರುವುದು ಬಾಲ್ಯ ವಿವಾಹವನ್ನು ನಿಯಂತ್ರಿಸಲು ಎದುರಾಗಿರುವಂತಹ ಅತಿ ದೊಡ್ಡ ತಡೆಗೋಡೆಗಳಾಗಿ ಮಾರ್ಪಟ್ಟಿವೆ.

ಬಾಲ್ಯ ವಿವಾಹವನ್ನು ಒಂದೇ ಸಮಯಕ್ಕೆ ಸಮಾಜದಿಂದ ಕಿತ್ತು ಹಾಕಲು ಕಷ್ಟ ಸಾಧ್ಯವಾದರೂ ಕಾಯ್ದೆ ಕಾನೂನುಗಳನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸುವುದು, ಬೇಟಿ ಬಚಾವೋ ಬೇಟಿ ಪಡಾವೋನಂತಹ ಕಾರ್ಯಕ್ರಮಗಳು, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತಮ ಸಹಕಾರ ನೀಡಿ ಸಾಕ್ಷರತೆಯ ಹೆಚ್ಚಳ ಮಾಡುವುದು, ಆರ್ಥಿಕವಾಗಿ ಸಬಲೀಕರಣಗೊಳಿಸಲು ವೃತ್ತಿಪರ ತರಬೇತಿ ಕಾರ್ಯಕ್ರಮ ಗಳನ್ನು ಅಭಿವೃದ್ಧಿಪಡಿಸಿ ಸಬಲೀಕರಣ ಮಾಡಿದಾಗ ಬಾಲ್ಯ ವಿವಾಹ ವಾಹಗಳನ್ನು ಬೇರು ಹಂತದಲ್ಲೇ ಕಿತ್ತು ಹಾಕಬಹುದು. ಈ ಕಾರ್ಯ ಸಾಧಿತವಾಗಬೇಕಾದರೆ ಪ್ರತಿಯೊಂದು ಸಮಾಜ, ಸಮುದಾಯ, ನಾಗರಿಕರು ಸರ್ಕಾರದೊಂದಿಗೆ ಕೈಜೋಡಿಸಬೇಕು ಆಗ ಮಾತ್ರ ಬಾಲ್ಯ ವಿವಾಹ ಮುಕ್ತ ಸಮಾಜ ಮತ್ತು ದೇಶವನ್ನು ಸೃಷ್ಟಿಸಬಹುದು.

# ಕ್ರಿಕೆಟ್ ಮತ್ತು ಅಭಿಮಾನ

■ **ಕೊಟ್ರೇಶ . ಅಕ್ಕಿ,** ಉಪನಾಯಕನಹಳ್ಳಿ

ಮೊನ್ನೆ ಬೆಂಗಳೂರಿನಲ್ಲಿ ನಡೆದ ಆರ್ಸಿಬಿ ವಿಜಯೋತ್ಸವ ಕಾರ್ಯಕ್ರಮದಲ್ಲಿ ಕಾಲ್ತುಳಿತ ಉಂಟಾಗಿ 11 ಜನ ಕ್ರಿಕೆಟ್ ಅಭಿಮಾನಿಗಳು ಮೃತರಾಗಿದ್ದು ಇತ್ತಿಚಿನ ದಿನಗಳಲ್ಲಿ ಕರ್ನಾಟಕ ರಾಜ್ಯ ಕಂಡ ದೊಡ್ಡ ದುರಂತವಾಗಿದ್ದು ರಾಷ್ಟದ ತುಂಬ ಸುದ್ದಿಯಾಯಿತು.ಕರ್ನಾಟಕ ಮತ್ತು ಕನ್ನಡಿಗರಿಗೆ ಇದು ಅರಗಿಸಿಕೊಳ್ಳಲಾಗದ ಪ್ರಕರಣವಾಗಿದೆ. ಸತ್ತವರಿಗೆ ಪರಿಹಾರ,ಸಂಬಂದಿಸಿದ ಸಂಸ್ಥೆಗಳ ಮೇಲೆ ಎಪ್ ಐ ಆರ್,ಪೋಲಿಸ್ ಅಧಿಕಾರಿಗಳ ತಲೆದಂಡ,ರಾಜಕೀಯ ಕಾರ್ಯದರ್ಶಿಯ ಅಮಾನತ್,ಪ್ರಕರಣ ಕುರಿತು ನ್ಯಾಯಾಂಗ ತನಿಖೆಗೆ ಕೈಗೊಂಡಿದ್ದು.ಈಗ ಸಿ ಐ ಡಿ ತನಿಖೆಗೂ ಅದೇಶಸಿಲಾಗಿದೆ.ಜೊತೆಗೆ ವಿರೋದ ಪಕ್ಷಗಳು ಸರಕಾರದ ಬುಡವನ್ನೆ ಅಲ್ಲಾಡಿಸುತ್ತಿದ್ದು. ಸಾಮಾಜಿಕ ಜಾಲತಾಣಗಳಲ್ಲಿ ಅಭಿಮಾನವು ಅತಿರೇಕ ಆಯಿತು ,ಕ್ರಿಕೆಟ್ ಎನ್ನುವುದೇ ಉದ್ಯಮವಾಗಿದೆ, ಕ್ರಿಕೆಟ್ ಎಲ್ಲ ಕ್ರೀಡೆಗಳನ್ನ ನುಂಗಿ ಹಾಕಿದೆ, ಕ್ರಿಕೆಟ್ ಎನ್ನುವುದು ಸಮೂಹಸನ್ನೆ ಆಗಿದೆ .ಐಪಿಎಲ್ ಎನ್ನುವುದು ಬೆಟ್ಟಿಂಗ್,ಜೂಜು ಗೆ ಪ್ರೇರಣೆಯಾಗಿದೆ, ಇಲ್ಲಿನ ಆಟಗಾರರು ಹರಾಜಿನಲ್ಲಿ ತಂದ ಕುದುರೆಗಳಂತೆ.ಅಲ್ಲಿ ರಾಜ್ಯದ ಕುರಿತು ಅಭಿಮಾನಿ ಇರುವುದಿಲ್ಲ. ಹೀಗೆ ಮುಂದುವರಿದರೆ ನಮ್ಮ ಸಮಾಜ ಎತ್ತ ಸಾಗುತಿದೆ ಎನ್ನುವ ಪ್ರಶ್ನೆಯನ್ನು ಮುಂದಿಡಲಾಗಿದೆ .18 ನೇ ವರ್ಷಕ್ಕೆ ಐಪಿಎಲ್ ಕಪ್ ಜಯಸಿದ್ದ ಆರ್ಸಿಬಿ ತಂಡವನ್ನು ಅಭಿನಂದಿಸಿಬೇಕಿದ್ದ ಅಭಿಮಾನಿಗಳ ಮನದಲ್ಲಿ ಸೂತಕ ಕವಿದಿದೆ.

ಭಾರತದಲ್ಲಿ ಈ ಪರಿಯಾಗಿ ಕ್ರಿಕೆಟ್ ಆವರಿಸಲು ಕಾರಣ ಹುಡುಕುತ್ತ ಹೋದರೆ ಮೊದಲಿಗೆ ಕಾಣುವುದೇ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ . ಇಂಗ್ಲೆಂಡ್ ದೇಶದ ರಾಷ್ಟ್ರೀಯ ಆಟವಾದ ಕ್ರಿಕೆಟ್ ಇಂದು ಭಾರತದಲ್ಲಿ ಹೆಮ್ಮರದಂತೆ ಹಬ್ಬಿ ಕೋಟಿ ಕೋಟಿ ಭಾರತೀಯರು ಆರಾಧಿಸುವ ಕ್ರೀಡೆಯಾಗಲು ಶತಮಾನಗಳ ನಂಟಿದೆ.ಭಾರತದಲ್ಲಿ ಬ್ರಿಟಿಷ್ ಅಧಿಕಾರಿಗಳು ತಾವು ಹೋದಲ್ಲಿ ಎಲ್ಲ ಬ್ಯಾಟು ಬಾಲ್ ತೆಗೆದುಕೊಂಡು ವಿಶ್ರಾಂತಿಯ ಸಮಯದಲ್ಲಿ ಕ್ರಿಕೆಟ್ ಆಟ ಶುರು ಮಾಡಿದರು.ಅವರ ಅಧೀನದಲ್ಲಿ ಕೆಲಸ ಮಾಡುತ್ತಿದ್ದ ಅಧಿಕಾರಿಗಳಾದಿಯಾಗಿ ಕ್ರಿಕೆಟ್ ಆಡುವುದನ್ನ ಎಲ್ಲರು ರೂಡಿ ಮಾಡಿಕೊಂಡರು. ಜೊತೆಗೆ ಕೆಲ ಭಾರತೀಯ ರಾಜರು ಕೂಡ ಕ್ರಿಕೆಟ್ ಆಟಕ್ಕೆ ಮನಸೋತು ಆಡಲಾರಂಬಿಸಿದರು. ಬಿಟ್ರಿಷ್ ಆಳ್ವಿಕೆಯ ಮಹಾನಗರಗಳಾದ ಮುಂಬೈ,ಮದ್ರಾಸನಲ್ಲಿ ಕ್ಲಬ್ಗಳು ಶುರುವಾದವು.ಆದರು ಕ್ರಿಕೆಟ್ ಎನ್ನುವುದು ಮೊದಲಿಗೆ ಶ್ರೀಮಂತರ ಕ್ರೀಡೆಯಾಗಿ ಉಳಿದಿತ್ತು.ತೀರಾ ಭಾರತದ ಗ್ರಾಮೀಣ ಪರಿಸರದೊಳಗೆ ಅದಿನ್ನು ಕಾಲಿಟ್ಟರಲಿಲ್ಲ.1930–50 ದಶಕದಲ್ಲಿ ಭಾರತ ತಂಡವು ರೂಪುಗೊಂಡು ಕೆಲವು ಅಂತರಾಷ್ಟ್ರೀಯ ಪಂದ್ಯಗಳನ್ನು ಆಡಿತ್ತು. ಭಾರತಕ್ಕೆ ಸ್ವತಂತ್ರ ಸಿಕ್ಕ ಮೇಲೆ ಆಂಗ್ಲರು ಕಲಿಸಿದ,ಬಿಟ್ಟುಹೋದ ಅನೇಕ ನಡೆನುಡಿಗಳನ್ನ ಭಾರತೀಯರಲ್ಲಿ ನಾವು ಕಾಣಬಹುದು .ಅದು ಉಡುಗೆ ತೊಡುಗೆಯಿಂದ ಹಿಡಿದು ಕ್ರಿಕೆಟ್ ಆಟದ ವರೆಗೂ ನೋಡಬಹುದು. ನಂತರ ದೇಶಿಯ ಕ್ರಿಕೆಟ್ ನಲ್ಲಿ ರಣಜಿ ಟ್ರೋಪಿ ಏರ್ಪಡಿಸಿ , ಕ್ರಿಕೆಟ್ಗೆ ಶಕ್ತಿ ತುಂಬಲಾಯಿತು. ಬರಿ ಭಾರತದಲ್ಲಿ ಅಷ್ಟೆ ಅಲ್ಲದೆ ಆಂಗ್ಲರು ಆಳಿದ ಎಲ್ಲ ದೇಶಗಳಲ್ಲಿ ಕ್ರಿಕೆಟ್ ಎನ್ನುವುದು ಇಂದು ಜನಪ್ರಿಯ ಕ್ರೀಡೆಯಾಗಿದೆ.


ಭಾರತದ ಕ್ರಿಕೆಟ್ ಬೆಳವಣಿಗೆಗೆ ವಿಶೇಷ ಕಾರಣವಾದದು.1983 ರಲ್ಲಿ ನಡೆದ ವಿಶ್ವಕಪ್ ನ್ನು ಕಪಿಲ್ ದೇವ ನಾಯಕತ್ವದ ಭಾರತ ತಂಡ ಜಯಿಸಿದ್ದು. ಆ ವರ್ಷದ ಟೂರ್ನಿಯಲ್ಲಿ ಯಾರು ಅಂದಾಜಿಸಲಾಗದ ತಂಡವೊಂದು ವಿರೋಚಿತವಾಗಿ ಗೆಲುವು ತಮ್ಮದಾಗಿಸಿಕೊಂಡಿತು. ರಾತ್ರೋ ರಾತ್ರಿ ಭಾರತದ ಮಾಧ್ಯಮಗಳಲ್ಲಿ ಬಾರತ ವಿಶ್ವಕಪ್ ಜಯಿಸಿದ್ದ ಅಂದಿನ ನಾಯಕ ಕಪಿಲ್ ದೇವ ಮತ್ತು ತಂಡದ ವಿಶ್ವಕಪ್ ಗೆಲುವಿನ ಸಾಹಸಗಾತೆಯನ್ನ ಬಿತ್ತರಿಸಲಾಗಿತ್ತು. ಭಾರತದ ಕ್ರಿಕೆಟ್ ಆಮೆ ವೇಗದಿಂದ ಮೊಲದ ಓಟಕ್ಕೆ ಜಿಗಿದ ಮೊದಲ ಘಟನೆಯಾಯಿತು

ವಿಶೇಷವಾಗಿ ಭಾರತ ನಗರಗಳಲ್ಲಿ ಕ್ರಿಕೆಟ್ ಮುಖ್ಯವಾದ ಕ್ರೀಡೆಯಾಯಿತು. ಒಂದು ಬ್ಯಾಟು ಒಂದು ಬಾಲ್ ನಾಲ್ಕೈದು ಹುಡುಗರು ಇದ್ದರೆ ಆಯಿತು ಕಿಕೆಟ್ ಆಡುವುದು ಸುಲಭ ಆಟ ಎನ್ನುವಂತಾಯಿತು. ವಿಶೇಷವಾಗಿ 1985 ರಿಂದ 1990 ಹುಟ್ಟಿದ ನಮ್ಮೊಳಗೆ ಕ್ರಿಕೆಟ್ ಅತಿಯಾಗಿ ನೆಲೆಯೂರಲು ಮುಖ್ಯ ಕಾರಣ ಅಂದಿನ ಸಾಮಾಜಿಕ ಪರಿಸರ ಎಂದರೆ ತಪ್ಪಗಲಾರದು.ಹಳ್ಳಿ ಹಳ್ಳಿಗಳಲ್ಲಿ ಕ್ರಿಕೆಟ್ ಎನ್ನುವ ಆಟವನ್ನು ಆಡಲು ಶುರು ಮಾಡಿದರು.ನನ್ನೂರು ಉಪನಾಯಕನಹಳ್ಳಿಯಲ್ಲಿ ಸುಮಾರು 1998 ರಿಂದ ಪಕ್ಕದ ಹಳ್ಳಿಯ ತಂಡದೊಂದಿಗೆ ಕ್ರಿಕಟ್ ಆಡುವುದನ್ನ ರೂಡಿ ಮಾಡಿಕೊಳ್ಳಲಾಗಿತ್ತು. ಈಗಂತು ಐಪಿಎಲ್ ಮಾದರಿಯಲ್ಲಿ ತಾಲೂಕ್ ಜಿಲ್ಲಾ ಮಟ್ಟದ ಲೀಗ್ ಗಳನ್ನು ಏರ್ಪಡಿಸುತ್ತಾರೆ.ಹಬ್ಬ ಜಾತ್ರೆ ಸಲುವಾಗಿ ಕೂಡ ಕ್ರಿಕೆಟ್ ಕ್ರೀಡಾಕೂಟವನ್ನು ಏರ್ಪಡಿಸುತ್ತಾರೆ.ಕ್ರಿಕೆಟ್ ನಮ್ಮ ಬದುಕಿನ ಬಹುಮುಖ್ಯ ಕ್ರೀಡೆಯಾಗಿದೆ.

ಈ ಮುಂಚೆ ಕ್ರಿಕೆಟ್ ನಲ್ಲಿ ಟೆಸ್ಟ್ ಹಾಗೂ ಏಕದಿನ ಪಂದ್ಯಗಳ ಸ್ವರೂಪದಲ್ಲಿತ್ತು

2003 ರಲ್ಲಿ ಗಂಗೂಲಿ ನಾಯಕತ್ವದ ತಂಡ ಏಕದಿನ ಪಂದ್ಯದಲ್ಲಿ ವಿಶ್ವಕಪ್ ಪೈನಲ್ ಬಂದು ಸೋತಿತು.

.ಯಾವಾಗ 2007 ರಲ್ಲಿ ಕಾಲಕ್ಕೆ ತಕ್ಕಂತೆ ಹಾಗುವ ಬದಲಾವಣೆ ಮನಗಂಡು ಖಿ20 ಎನ್ನುವ ಹೊಸ ಮಾದರಿ ಕ್ರಿಕೆಟ್ ಬಂತು. ಮೊದಲ ಖಿ20 ವಿಶ್ವಕಪ್ ದೋನಿ ನಾಯಕತ್ವದ ಭಾರತದ ತಂಡ ಪಾಲಾಯಿತು .ಕ್ರಿಕೆಟ್ ಜ್ವರ ಇನಷ್ಟು ವ್ಯಾಪಿಸಿತು. ಇದನ್ನೆಲ್ಲ ಗಮನಿಸಿ ಬಿಸಿಸಿಐ , ಇಂಡಿಯಾ ಪ್ರೀಮಿಯರ್ ಲೀಗ 2008 ರಲ್ಲಿ ಪರಿಚಯಿಸಿದರು. ಅಲ್ಲಿಂದ ಕ್ರಿಕೆಟ್ ಶುದ್ಧ ಉದ್ಯಮವಾಗಿ ರೂಪುಗೊಂಡಿತು. ಹರಾಜಿನಲ್ಲಿ ಖರೀದಿಯಾಗುವ ಆಟಗಾರನಿಗೆ ಆ ಫ್ರಾಂಚೈಸಿಯಿಂದ ಕೋಟಿ ಕೋಟಿ ಹಣ ಬರತೊಡಗಿತು. ಜೂಜು,ಬೆಟ್ಟಿಂಗ್ ,ಪ್ಯಾಂಟಸಿ ಗೇಮ್ಗಳು ಹೆಚ್ಚಾದಾವು . ಸಾಕಷ್ಟು ಉದ್ಯಮಿಗಳು.ಪ್ರಖ್ಯಾತ ಸಿನಿಮಾ ನಟ–ನಟಿಯರು ಕ್ರಿಕೆಟ್ ನಿಂದ ಹಣಗಳಿಸುವ ಸಲುವಾಗಿ ಸಾಕಷ್ಟು ಪ್ರಾಂಚೈಸಿಗಳ ಮಾಲೀಕರಾದರು. ಕ್ರಿಕೆಟ್ ಜನಪ್ರಿಯತತೆಗೆ ಬೆರಗಾದ ಜಾಹೀರಾತು ಉದ್ಯಮ ಕ್ರಿಕೆಟ್ ಆಟಗಾರರ ಹಿಂದೆ ಬಿದ್ದಿತು. ಬೆರಳ ತುದಿಯಲ್ಲಿ ಕ್ರಿಕೆಟ್ನ್ನು ಆಂಡ್ರಾಯ್ಡ್ ಮೊಬೈಲ್ನಲ್ಲಿ ನೋಡಲು ಜನರು ಶುರು ಮಾಡಿದರು. ಖಿ20 ಕ್ರಿಕೆಟ ಆಟವನ್ನು ಹೊಡಿಬಡಿ ಆಟಗಾರರ ಪರವಾಗಿದ್ದು.ಕ್ರಿಕೆಟ್ನಲ್ಲಿ ಕೌಶಲ್ಯ ಕಳೆದು ಹೋಗುತ್ತದೆ ಎಂದು ಅಂದೇ ಆಸ್ಟೇಲಿಯಾದ ಆಟಗಾರ ರಿಕಿ ಪಾಂಟಿಂಗ್ ಮೊದಲಿಸಿದ್ದರು. ಈಗ ಅವರೆ ಪಂಜಾಬ್ ತಂಡದ ಕೋಚ್ ಆಗಿ ಮೊನ್ನೆ ಕಾರ್ಯನಿಸಿದ್ದಾರೆ. ಇದೆ ಕಾಲನ ವಿಪರ್ಯಾಸ ಅನ್ನಬಹುದು.



ಭಾರತದ ದೇಶವು ಅನೇಕ ರಾಜ್ಯ,ಅನೇಕ ಭಾಷೆ,ಅನೇಕ ಸಂಸ್ಕೃತಿಗಳಿಂದ ಕೂಡಿದ್ದ ಸಮಯದಲ್ಲಿ ಕ್ರಿಕೆಟ್ ಎನ್ನುವುದು ಎಲ್ಲರನ್ನು ಒಗ್ಗೂಡಿಸುವ ಶಕ್ತಿಯಾಗಿರೂಪುಗೊಂಡಿತು.ಕಾಶ್ಮೀರದಿಂದಹಿಡಿದುಕನ್ಯಾಕುಮಾರಿವರೆಗೆ ಭಾರತದಲ್ಲಿ ಕ್ರಿಕೆಟ್ ಆಟವನ್ನು ನೋಡಬಹುದಾಗಿದೆ. ಒಬ್ಬ ವ್ಯಕ್ತಿಗೆ ಒಂದೊಂದು ಅಭಿರುಚಿ ಇರುತ್ತದೆ.ಕೆಲವೊಬ್ಬರಿಗೆ ಸಾಹಿತ್ಯ, ಕಲೆ,ಆದರೆ ಹಲವರಿಗೆ ಕ್ರೀಡೆ, ಅದೆಲ್ಲವು ಕೂಡ ಆತನ ಮನೆ,ಊರು,ಶಾಲೆಯಿಂದ ಬಳುವಳಿಯಾಗಿರುತ್ತವೆ.ಯಾವುದನ್ನು ಒತ್ತಾಯ ಪೂರ್ವಕವಾಗಿ ಹೇರಲು ಆಗುವುದಿಲ್ಲ.ನೀನು ಇಂತದ್ದೆ ಸಿನಿಮಾ ನೋಡಬೇಕು.ನೀನು ಇಂತದ್ದೆ ಕ್ರೀಡೆ ಆಡಬೇಕು ಅಂದರೆ ಅದೆಲ್ಲ ಆಗಲಾರದ ಮಾತು.ಭಾರತದ ರಾಷ್ಟ್ರೀಯ ಕ್ರೀಡೆ ಹಾಕಿ ಎನ್ನುವುದನ್ನ ನಾನು ಆರನೇ ತರಗತಿ ಓದುವಾಗ ಪಠ್ಯದಲ್ಲಿ ತಿಳಿದುಕೊಂಡೆ. ಶಾಲೆ ದಿನಗಳಲ್ಲಿ ಕೊಕ್ಕೊ ಕಬ್ಬಡಿ ವಾಲಿಬಾಲ್ ಆಟಗಳು ಆಡುತ್ತಿದ್ದ ನಾವುಗಳು ಕ್ರಿಕೆಟನ್ನು ರಜೆದಿನಗಳಲ್ಲಿ ಅತಿಯಾಗಿ ಸಂಭ್ರಮದಿಂದ ಅಡುತ್ತಿದ್ದೇವು. ಕ್ರೀಡೆ ಎನ್ನುವುದು ಕೂಡ ಮನುಷ್ಯನ ತುಷ್ಟಿಗುಣದ ಮೇಲೆ ನಿಂತಿದೆ.ಗ್ರಾಮೀಣ ಕ್ರೀಡೆಗಳು ಇವು ,ರಾಷ್ಟ್ರೀಯ ಕ್ರೀಡೆ ಇದು,ನೀವು ಆಡಲೆ ಬೇಕು ಮಕ್ಕಳ ಒತ್ತಾಯಿಸದರೆ ಮಗು ಅಂತಹ ಆಟವನ್ನ ಆಡುವುದಿಲ್ಲ. ಮಗುವಿಗೆ ಅದು ಹಿಡಿಸಬೇಕು.ಖುಷಿ ಕೊಡಬೇಕು.ತನ್ನ ಸುತ್ತಮುತ್ತ ಎಲ್ಲರು ಅದನ್ನು ಆಡುತ್ತಿರಬೇಕು ಅಂತಹ ಕ್ರೀಡೆಯ ಕಡೆಗೆ ಅದರ ಒಲವು ಹೆಚ್ಚುವುದು. ಕ್ರಿಕೆಟ್ ಆಟ ಐಪಿಎಲ್ ಬರುವುದಕ್ಕೂ ಮುಂಚಿನಂತೆ ಈಗಿಲ್ಲ ಅನ್ನುವುದು ಒಪ್ಪೋಣ ಐಪಿಎಲ್ ನಲ್ಲಿ ಬೆಂಗಳೂರು ನಗರದ ಹೆಸರು ಇಟ್ಟುಕೊಂಡು ಇಷ್ಟು ವರ್ಷಗಳ ಕ್ರಿಕೆಟ್ ಆಡಿದ ತಂಡವನ್ನ ಏಕಾಏಕಿ ಇದು ಕನ್ನಡದ ತಂಡ ಆಗುವುದಿಲ್ಲ, ಇದರಲ್ಲಿ ಕನ್ನಡಿಗರಿಲ್ಲ,ಇವರು ಹರಾಜಿನಲ್ಲಿ ಬಂದ ಆಟಗಾರರು ಅಂದರೆ ತಪ್ಪಾಗುವುದು. ಹೌದು ಉದ್ಯಮದ ಸ್ವರೂಪ ಪಡೆದ ಕ್ರಿಕೆಟ್, ಈಗ ಹಾಳಾಗುತಿದ್ದೆ.ಜನರು ಜೂಜು ಬೆಟ್ಟಿಂಗ್ ದಂದೆಯಲ್ಲಿ ಇದ್ದರೆ ಅಂದರೆ ಆಳುವ ಸರಕಾರಗಳು ಇದರ ಕುರಿತು ಚಿಂತಿಸಿ ಅಂಕುಶ ಹಾಕಲಿ . ಆದರೆ ಕ್ರಿಕೆಟ್ ಆಟವೆ ಸರಿಯಿಲ್ಲ ಅನ್ನುವ ಮಾತನ್ನು ಒಪ್ಪಲಾರೆವು. ನಾವು ಪ್ರೀತಿಸಿದ ನಮ್ಮೊಳಗೆ ಸಾಮರಸ್ಯ ಮೂಡಿಸಿದ. ನಮ್ಮ ನೆನಪುಗಳ ತಿಜೋರಿಯೊಳಗೆ ಕ್ರಿಕೆಟ್ ಎನ್ನುವುದು ಅನಂತ ನೆನಪುಗಳ ಸರಮಾಲೆಯಾಗಿದೆ.

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ವಿಶ್ವವಸು

**10–06–2025 – ಮಂಗಳವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಅನುರಾಧ |
| ಯೋಗ | : ಸಿದ್ಧಿ |
| ಕರಣ | : ವಾಣಿಜ |
| ಸೂರ್ಯೋದಯ | : 05:41:49 |
| ಸೂರ್ಯಾಸ್ತ | : 19:11:11 |
| ರಾಹು ಕಾಲ | : 15:49–17:30 |
| ಯಮಘಂಡ ಕಾಲ | : 09:04–10:45 |
| ಗುಳಿಕ ಕಾಲ | : 12:27–14:08 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 09–06–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1601.69 ಅಡಿ |
| ಒಳ ಹರಿವು | 7653 ಕ್ಯುಸೆಕ್ |
| ಹೊರ ಹರಿವು | 213 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 23.786 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1579.36 ಅಡಿ |
| ಒಳ ಹರಿವು | 2655 ಕ್ಯುಸೆಕ್ |
| ಹೊರ ಹರಿವು | 8 ಕ್ಯುಸೆಕ್ |
| ಸಾಮರ್ಥ್ಯ | 4.168 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ರಾಯಚೂರ ಜಿಲ್ಲೆಯಲ್ಲಿ ಭಾರಿ ಮಳೆ ಸಾಧ್ಯತೆಯ ಮುನ್ಸೂಚನೆ

## ಮುಂಜಾಗ್ರತಾ ಕ್ರಮಕ್ಕೆ ಜಿಲ್ಲಾಧಿಕಾರಿ ಸೂಚನೆ

■ **ಹಂಪಿ ಟೈಮ್ಸ್ ರಾಯಚೂರು**

ಹವಾಮಾನ ಇಲಾಖೆಯ ವರದಿಯನ್ವಯ ಮೇ 24 ರಂದು ನೈಋತ್ಯ ಮಾನ್ಸೂನ್ ಕೇರಳ ಪ್ರವೇಶಿಸಿದ್ದು, ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ಹಿನ್ನಲೆಯಲ್ಲಿ ಜಿಲ್ಲೆಯಲ್ಲಿ ಭಾರಿ ಮಳೆ ಹಾಗೂ ಪ್ರವಾಹ ಕುರಿತು ಮುಂಜಾಗೃತಾ ಕ್ರಮಕೈಗೊಳ್ಳುವಂತೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಜಿಲ್ಲೆಯಲ್ಲಿ ಯಾವುದೇ ಸಂದರ್ಭದಲ್ಲಿ ಭಾರಿ ಮಳೆ ಹಾಗೂ ಪ್ರವಾಹ ಎದುರಾದಲ್ಲಿ ಸಮರ್ಥವಾಗಿ ಎದುರಿಸಲು ಜಿಲ್ಲಾ, ತಾಲೂಕು, ಹೋಬಳಿ ಹಾಗೂ ಗ್ರಾಮ ಪಂಚಾಯತ್ ಮಟ್ಟದ ಅಧಿಕಾರಿ ಗಳು ಸಿದ್ಧರಿರಬೇಕು. ಜಿಲ್ಲಾ, ತಾಲೂಕು, ಹೋಬಳಿ ಹಾಗೂ ಗ್ರಾಮ ಪಂಚಾಯತ್ ಮಟ್ಟದ ಅಧಿಕಾರಿ ಹಾಗೂ ಸಿಬ್ಬಂದಿಯು ಕೇಂದ್ರ ಸ್ಥಾನದಲ್ಲಿದ್ದು ಪ್ರವಾಹ ಹಾಗೂ ಭಾರಿ ಮಳೆಯಿಂದ ಯಾವುದೇ ಅಹಿತಕರ ಘಟನೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ನದಿ, ಹಳ್ಳ, ಕೆರೆ ದಡದಲ್ಲಿ ಬಟ್ಟೆ ತೊಳಿಯುವುದು, ಈಜಾಡುವುದು, ದನ ಅಥವಾ ಕರುಗಳನ್ನು ಮೆಯಿಸುವುದು ಹಾಗೂ ಅಪಾಯವಿರುವ ಸೇತುವೆಗಳಲ್ಲಿ ಸಂಚರಿಸುವುದು ಮತ್ತು ಇತರೆ ಚಟುವಟಿಕೆ ನಡೆಸದಂತೆ ಕ್ರಮವಹಿಸಬೇಕು.

ನಿರಂತರ ಮಳೆಯಿಂದ ಅಪಾಯವಿರುವ ಮನೆ, ಗೋಡೆ, ಶಾಲೆಗಳು ಹಾಗೂ ಇತರೆ ಕಟ್ಟಡಗಳು ಕುಸಿಯುವ ಸಾಧ್ಯತೆ ಇರುವುದರಿಂದ ಸಾವು ನೋವುಗಳು ಸಂಭವಿಸುವ ಸಂದರ್ಭವಿರುತ್ತದೆ. ಆದ್ದರಿಂದ ಸಾರ್ವಜನಿಕರಿಗೆ ಸುರಕ್ಷತೆಯ ಮುನ್ನೆಚ್ಚರಿಕೆಯ ಕ್ರಮ ತೆಗೆದುಕೊಳ್ಳವುದು ಅಥವಾ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಜಾಗೃತಿ ಮೂಡಿಸುವುದು. ನದಿ ದಡದ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರು ಅಪಾಯವಿರುವ ನದಿ ಅಥವಾ ಹಳ್ಳಗಳಲ್ಲಿ ಈಜಾಡುವುದು ಮತ್ತು ಪೋಟೋ, ಸೆಲ್ಪಿ ತೆಗೆಯದಂತೆ ಕ್ರಮವಹಿಸುವುದು.

ಸಹಾಯವಾಣಿ: ಮಳೆ ಹಾಗೂ ಪ್ರವಾಹ ಸೇರಿದಂತೆ ಇತರೆ ಸಮಸ್ಯೆಗಳ ತುರ್ತು ಪರಿಹಾರಕ್ಕಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಹಾಯವಾಣಿ ಕೇಂದ್ರಗಳು ತೆರೆಯಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರ: 08532–226383 ಅಥವಾ ರಾಯಚೂರು ಜಿಲ್ಲಾಧಿಕಾರಿಗಳ ಕಾರ್ಯಾಲಯ: 1077, ರಾಯಚೂರು ಮಹಾನಗರ ಪಾಲಿಕೆ: 08532–200551, ರಾಯಚೂರು ತಹಶೀಲ್ದಾರ್ ಕಾರ್ಯಾಲಯ: 08532–200772, ಮಾನವಿ ತಹಶೀಲ್ದಾರ್ ಕಾರ್ಯಾಲಯ: 08538–220239, ಸಿಂಧನೂರು ತಹಶೀಲ್ದಾರ್ ಕಾರ್ಯಾಲಯ: 9035640154, ಲಿಂಗಸೂಗೂರು ತಹಶೀಲ್ದಾರ್ ಕಾರ್ಯಾಲಯ: 08537–275247, ದೇವದುರ್ಗ ತಹಶೀಲ್ದಾರ್ ಕಾರ್ಯಾಲಯ: 08531–200117, ಸಿರವಾರ ತಹಶೀಲ್ದಾರ್ ಕಾರ್ಯಾಲಯ: 08538–200082, ಮಸ್ಕಿ ತಹಶೀಲ್ದಾರ್ ಕಾರ್ಯಾಲಯ: 08537–295504ಗೆ ಸಾರ್ವಜನಿಕರು ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾಲ್ತುಳಿತ ಪ್ರಕರಣ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ

**ಎರಡನೆ ಪುಟದಿಂದ**

**ಬಿಜೆಪಿಯ ಇಂತಹ ಇಬ್ಬದಿತನದ ನಿಲುವು**

ಹಲವಾರು ವರ್ಷಗಳ ಕನಸನ್ನು ಆರ್ ಸಿ ಬಿ ಕನಸು ನನಸಾಗಿಸಿದ್ದು, ಓಪನ್ ಬಸ್ ನಲ್ಲಿ ಮೆರವಣಿಗೆ ಮಾಡಲು ಅನುಮತಿ ನೀಡದಿರುವುದು ಗೃಹ ಸಚಿವರ ಅಸಮರ್ಪಕತೆಯನ್ನು ತೋರಿಸುತ್ತದೆ ಎಂದು ರಾಜ್ಯ ಬಿಜೆಪಿಯವರು ಪತ್ರ ಬರೆದಿದ್ದಾರೆ. ಆದರೆ ಈಗ ಘಟನೆಯ ನಂತರ ಸರ್ಕಾರವನ್ನು ದೂರುತ್ತಿದ್ದಾರೆ. ರಾಜ್ಯ ಬಿಜೆಪಿಯ ಇಂತಹ ಇಬ್ಬದಿತನದ ನಿಲುವು ತೋರುತ್ತದೆ ಎಂದರು.

**ಸರ್ಕಾರಕ್ಕೆ ಮುಜುಗರವಾಗುವ ಪ್ರಶ್ನೆಯಿಲ್ಲ**

ಸರ್ಕಾರ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಪ್ಪು ಹೆಜ್ಜೆ ಇಟ್ಟಿಲ್ಲ. ಹಾಗೂ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ತೆಗೆದುಕೊಂಡಿರುವ ಕಾರಣ, ಸರ್ಕಾರಕ್ಕೆ ಮುಜುಗರವಾಗುವ ಪ್ರಶ್ನೆಯಿಲ್ಲ. ಉತ್ತರಪ್ರದೇಶದ ಕುಂಭಮೇಳದ ಸೇತುವೆ ಬಿದ್ದ ಪ್ರಕರಣದಲ್ಲಿ ಜನರು ಮೃತ್ತಪಟ್ಟ ಸಂದರ್ಭದಲ್ಲಿ ಅಲ್ಲಿನ ಮುಖ್ಯಮಂತ್ರಿಗಳು ರಾಜಿನಾಮೆ ನೀಡಿದರೇ? ಬಿಜೆಪಿ ಹಾಗೂ ಜೆಡಿಎಸ್ನವರು ಅಲ್ಲಿನ ಮುಖ್ಯಮಂತ್ರಿಗಳ ರಾಜಿನಾಮೆ ಕೇಳಿದರೇ? ಎಂದು ಮರುಪ್ರಶ್ನಿಸಿದರು.

ಸುಹಾಸ್ ಶೆಟ್ಟಿ ಪ್ರಕರಣದಲ್ಲಿ, ತನಿಖೆಯನ್ನು ಎನ್ ಐ ಎಗೆ ವಹಿಸಲಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಈ ಬಗ್ಗೆ ಅಡ್ವೋಕೇಟ್ ಜನರಲ್ ಅವರೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು.

ದಸರಾ ಪೂರ್ವಭಾವಿ ಸಭೆ ಹಾಗೂ ಕೆಡಿಪಿ ಸಭೆಗಳ ಬಗ್ಗೆ ಪ್ರತಿಕ್ರಿಯೆ ನೀಡಿ, ಮೈಸೂರಿನಲ್ಲಿ ಕೆಡಿಪಿ ಹಾಗೂ ದಸರಾ ಸಭೆ ನಡೆಸುವ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು ಎಂದರು.

# ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷೆ ಅವಧಿ ವಿಸ್ತರಣೆ

■ **ಹಂಪಿ ಟೈಮ್ಸ್ ಹೊಸಪೇಟೆ**



2025–26ನೇ ಸಾಲಿನ ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷೆಯಲ್ಲಿ ಇದುವರೆಗೂ ಭಾಗವಹಿಸದೇ ಇರುವ ಕರ್ನಾಟಕ ರಾಜ್ಯಕ್ಕೆ ಸೇರಿದ ಪರಿಶಿಷ್ಟ ಜಾತಿ ಕುಟುಂಬದವರಿಗೆ ಜೂನ್.9 ರಿಂದ ಜೂನ್.22 ರವರೆಗೆ ಕಾಲವಧಿಯನ್ನು ವಿಸ್ತರಿಸಲಾಗಿದೆ ಆನ್‌ಲೈನ್ ಮೂಲಕ ನೋಂದಾಯಿಸಲು ಅವಕಾಶ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ಅನ್‌ಲೈನ್ ಮೂಲಕ https://schedulecastesurvey.karnataka.gov.in/selfdeclaration ಲಿಂಕ್ ಮೂಲಕ ಸ್ವಯಂ ಘೋಷಣೆ ಮಾಡಿಕೊಳ್ಳಬಹುದು. ಸಾರ್ವಜನಿಕರ ಅನುಕೂಲಕ್ಕಾಗಿ ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ವಿಜಯನಗರ ಹಾಗೂ ವಿಧಾನಸಭಾ ಕ್ಷೇತ್ರವಾರು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಕಂಟ್ರೋಲ್ ರೂಂ ಗಳನ್ನು ಸ್ಥಾಪಿಸಲಾಗಿದೆ. ವಿಜಯನಗರ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾ ನೋಡಲ್ ಅಧಿಕಾರಿ ಹಾಗೂ ಜಿಲ್ಲಾ ಅಧಿಕಾರಿಗಳು ಕೆ.ಬಿ.ರಾಮಚಂದ್ರಪ್ಪ ಮೊ.9141827465, ವಿಜಯನಗರ ರಮೇಶ್ ಮೊ.8095002829, ಹೊಸಪೇಟೆ ನಜೀಮಾ ಭಾನು ಮೊ. 9108777499, ಹಗರಿಬೊಮ್ಮನಹಳ್ಳಿ ಆನಂದ.ವೈ.ಡೊಳ್ಳಿನ ಮೊ.99019 80762, ಕೂಡ್ಲಿಗಿ ಶಾಹೇಖಾ ಅಹ್ಮದಿ ಮೊ.8105909630, ಹಡಗಲಿ ಜ್ಯೋತಿ ಮೊ.9482608061, ಹರಪನಹಳ್ಳಿ ಎಸ್.ಆರ್.ಗಂಗಪ್ಪ ಮೊ.9739094433 ಸಮೀಕ್ಷೆಯ ಬಗ್ಗೆ ಮಾಹಿತಿ ಪಡೆಯಲು ಕಂಟ್ರೋಲ್ ರೂಂ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸಬೇಕೆಂದು ತಿಳಿಸಿದ್ದಾರೆ.

# ಕೌಶಲ್ಯಾಭಿವೃದ್ಧಿಗೆ ಕೈಜೋಡಿಸಿ

**ಮೊದಲ ಪುಟದಿಂದ**

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮಾತನಾಡಿ, ಜಿಲ್ಲೆಯಲ್ಲಿ ಕೈಗಾರಿಕಾ ವಲಯಗಳು ಹೆಚ್ಚಾಗಿದ್ದು, ಉದ್ಯೋಗದಾತರು ಕೌಶಲ್ಯ ಶಿಕ್ಷಣ ಅಳವಡಿಸಬೇಕು. ಜೊತೆಗೆ ಸುರಕ್ಷತೆ ಮತ್ತು ದಕ್ಷತೆಗೆ ಆದ್ಯತೆ ನೀಡಬೇಕು. ಇದಕ್ಕೆ ಬೇಕಾದ ಎಲ್ಲಾ ಅಗತ್ಯ ಸಹಕಾರ ಜಿಲ್ಲಾಡಳಿತ ನೀಡಲಿದೆ ಎಂದು ಹೇಳಿದರು.

ಇದೇ ವೇಳೆ ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಕಾರ್ಖಾನೆಗಳ ವ್ಯವಸ್ಥಾಪಕರು ಮತ್ತು ಪಾಲುದಾರರು, ಈ ಭಾಗದ ಯುವ ಜನತೆಯು ಕೌಶಲ್ಯಾಧಾರಿತ ಶಿಕ್ಷಣ ಹೆಚ್ಚು ಅಳವಡಿಸಿ ಕೊಳ್ಳಬೇಕಿದೆ ಎಂದು ಅನಿಸಿಕೆ ಹಾಗೂ ಅಭಿಪ್ರಾಯ ಹಂಚಿಕೊಂಡರು. ಈ ಸಂದರ್ಭದಲ್ಲಿ ಬೆಂಗಳೂರಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕ ಡಾ.ದಿನೇಶ್ ಕುಮಾರ್ ವೈ.ಕೆ., ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಬಿ.ಸೋಮಶೇಖರ ಸೇರಿದಂತೆ ಜಿಲ್ಲೆಯ ವಿವಿಧ ಮೈನಿಂಗ್ ಮತ್ತು ಸ್ಟೀಲ್ ಕಾರ್ಖಾನೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಕುದಿಸಿ ಆರಿಸಿ ಸೋಸಿದ ನೀರು ಕುಡಿಯಿರಿ

## ಡಿಹೆಚ್‌ಓ ಡಾ.ಯಲ್ಲಾ ರಮೇಶ್‌ಬಾಬು । ಕೊಳಚೆ ಪ್ರದೇಶದಲ್ಲಿ ಜಾಗೃತಿ

■ **ಹಂಪಿ ಟೈಮ್ಸ್ ಬಳ್ಳಾರಿ**

ನಿರಂತರ ಮಳೆಯಿಂದ ಬಡಾವಣೆಗಳಲ್ಲಿ ಕುಡಿಯುವ ನೀರಿನ ಮೂಲಗಳ ಸುರಕ್ಷತೆಯು ಸಾರ್ವಜನಿಕರ ಆದ್ಯತೆಯೂ ಆಗಿದ್ದು, ಹಾಗಾಗಿ ಅವುಗಳನ್ನು ಕಾಪಾಡಿಕೊಳ್ಳುವುದರ ಜೊತೆಗೆ ಕುದಿಸಿ ಆರಿಸಿ ಸೋಸಿದ ನೀರನ್ನು ಕುಡಿಯುವ ಮೂಲಕ ಸಂಭಾವ್ಯ ವಾಂತಿ ಭೇದಿ ಪ್ರಕರಣಗಳು ಉಂಟಾಗದಂತೆ ಸಾರ್ವಜನಿಕರು ಕೈ ಜೋಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಬಳ್ಳಾರಿ ನಗರದ ಗೌತಮ್ ನಗರ ಕೊಳಚೆ ಪ್ರದೇಶಕ್ಕೆ ಭೇಟಿ–ಜಾಗೃತಿಯಲ್ಲಿ ಅವರು ಮಾತನಾಡಿದರು. ಕಲುಷಿತ ನೀರು ಮತ್ತು ಕಲುಷಿತ ಆಹಾರ ಸೇವನೆಯಿಂದ ಸಾಮಾನ್ಯವಾಗಿ ವಾಂತಿ ಬೇಧಿ ಸೇರಿದಂತೆ ಟೈಫಾಯಿಡ್, ಕಾಲಾರ ಮುಂತಾದ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಇರುತ್ತವೆ. ಕಳೆದ ಕೆಲವು ದಿನಗಳಿಂದ ಮಳೆಯಾಗುತ್ತಿದೆ. ಕುಡಿಯುವ ನೀರಿನ ಮೂಲಗಳು ಕಲುಷಿತವಾಗುವ ಸಾಧ್ಯತೆ ಇರುತ್ತವೆ ಎಂದರು.

ಮನೆಯ ಮುಂದೆ ನಳದ ಪೈಪ್‌ಗಳು ತಗ್ಗಿನಲ್ಲಿ ಕಂಡುಬರುತ್ತಿದ್ದು, ಇದರಿಂದ ಅನಗತ್ಯ ನೀರು ಸಂಗ್ರಹವಾಗಿ ಪುನಃ ನೀರಿನ



ಪೈಪ್‌ಗಳಲ್ಲಿ ವಾಪಾಸ್ಸು ಹೋಗುವ ಮೂಲಕ ನೀರು ಕಲುಷಿತವಾಗುವ ಸಾಧ್ಯತೆಯಿದ್ದು, ಈ ಹಿನ್ನಲೆಯಲ್ಲಿ ನಳದ ಪೈಪ್‌ಗಳು ಮನೆಯ ಮುಂದೆ ನೆಲದ ಮೇಲ್ಮಟ್ಟದಲ್ಲಿ ಇರುವಂತೆ ಜಾಗೃತೆ ವಹಿಸಬೇಕು ಎಂದು ತಿಳಿಸಿದರು.

ಸಂಭಾವ್ಯ ವಾಂತಿ–ಭೇದಿ ಕಂಡುಬರದಂತೆ ಜಾಗ್ರತೆ ವಹಿಸಲು ಮಲ–ಮೂತ್ರ ವಿಸರ್ಜನೆಗಾಗಿ ಶೌಚಾಲಯಗಳನ್ನೇ ಬಳಸಬೇಕು. ಸಾಧ್ಯವಾದಷ್ಟು ಬಿಸಿ ಆಹಾರ ಸೇವನೆಗೆ ಆದ್ಯತೆ ನೀಡಬೇಕು. ರಸ್ತೆ ಬದಿ ತೆರೆದಿಟ್ಟ ಅಥವಾ ಕತ್ತರಿಸಿದ ಹಣ್ಣು ತಿನ್ನಬಾರದು. ಊಟದ ಮೊದಲು ಹಾಗೂ ಶೌಚದ ನಂತರ ಕೈಗಳನ್ನು ಸಾಬೂನು ಮತ್ತು ನೀರಿನಿಂದ ತಪ್ಪದೇ ತೊಳೆಯಬೇಕು. ಒಂದು ವೇಳೆ ವಾಂತಿ–ಭೇದಿ ಅಥವಾ ಕಾಲರಾ ಸೋಂಕಿತರಿಗೆ ಮನೆಯಲ್ಲಿ ತಯಾರಿಸಿದ ಗಂಜಿ, ಬೇಳೆ ತಿಳಿ, ನಿಂಬು ಪಾನಕ ಹಾಗೂ ಸಾಧ್ಯವಾದರೆ ಎಳೆನೀರು ಕೊಡಬೇಕು.

ಜಿಲ್ಲೆಯಲ್ಲಿ ಜಿಲ್ಲಾ ಕಾಲಾರ ನಿಯಂತ್ರಣ ತಂಡ ಈಗಾಗಲೇ ನಿರಂತರವಾಗಿ ನೀರಿನ ಮೂಲಗಳ ಪರೀಕ್ಷೆ ಕೈಗೊಳ್ಳಲಾಗುತ್ತಿದ್ದು, ಸಾರ್ವಜನಿಕರು ಸಾಂಕ್ರಾಮಿಕ ರೋಗಗಳಿಂದ ಜಾಗ್ರತೆ ವಹಿಸಬೇಕು ಎಂದು ತಿಳಿಸಿದರು.

**ಓಆರ್‌ಎಸ್ ಜೀವಜಲ ಬಳಕೆ:**

ವಾಂತಿಭೇದಿ ಉಂಟಾದ ಸಂದರ್ಭದಲ್ಲಿ ದೇಹದ ನಿರ್ಜಲೀಕರಣ ತಡೆಯಲು ಓಆರ್‌ಎಸ್ ಜೀವಜಲ ದ್ರಾವಣವು ಅತ್ಯಂತ ಪರಿಣಾಕಾರಿಯಾಗಿದ್ದು, ಒಂದು ಲೀಟರ್ ನೀರಿಗೆ ಸಂಪೂರ್ಣ ಒಂದು ಪೊಟ್ಟಣದ ಪುಡಿಯನ್ನು ಸ್ವಚ್ಚವಾದ ಪಾತ್ರೆಯಲ್ಲಿ ಹಾಕುವ ಮೂಲಕ ದ್ರಾವಣ ತಯಾರಿಸಿ ಒಂದು ದಿನದ ಒಳಗಡೆ ಜೀವಜಲ ದ್ರಾವಣ ಕುಡಿಯುವ ಮೂಲಕ ಖಾಲಿ ಮಾಡಬೇಕು. 24 ಗಂಟೆಗಳ ನಂತರ ಪುನಃ ಬಳಸಬಾರದು ಎಂದು ವಿವರವಾಗಿ ತಿಳಿಸಿದರು.

ಗೌತಮ್ ನಗರ ಬಡಾವಣೆಯ ನಮ್ಮ ಕ್ಲಿನಿಕ್ ವೈದ್ಯರಾದ ಡಾ.ಸ್ಯಾಮುವೆಲ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್. ದಾಸಪ್ಪನವರ, ಹೆಚ್‌ಐಓ ದುರ್ಗಾಪ್ರಸಾದ್, ಯೋಗಾ ನಂದ, ಆಶಾಕಾರ್ಯಕರ್ತೆ ಸಾಜಿಯಾ, ಗೀತಾ, ಸುಮಿತ್ರ, ವೀರಭದ್ರ ಸೇರಿದಂತೆ ಸಾರ್ವಜನಿಕರು ಹಾಜರಿದ್ದರು.

# ಭಾರಿ ಮಳೆ ಸಂಚಾರ್ ಬಂದ್, ಮನೆಗಳಿಗೆ ಹಾನಿ

**ಮೊದಲ ಪುಟದಿಂದ**

ಭೇಟಿ ನೀಡಿ ಲೋಕೋಪಯೋಗಿ ಮತ್ತು ಪಟ್ಟಣ ಪಂಚಾಯಿತಿಯ ಸಿಬ್ಬಂದಿಗಳಿಂದ ಜೆಸಿಬಿ ಯಂತ್ರದಿಂದ ಕಾಲುವೆ ಮೂಲಕ ನೀರು ಸರಾಗವಾಗಿ ಹರಿಯುವಂತೆ ಮಾಡಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುತ್ತದೆ ಎಂದರು.

ಅಲಬೂರು ಹಗರಿಹಳ್ಳದಲ್ಲಿ ಹೆಚ್ಚಿನ ನೀರು ಬಂದಿರುವ ಕಾರಣ ಕೋಗಳಿ–ಕನ್ನಿಹಳ್ಳಿ ಸಂಪರ್ಕ ಸೇತುವೆ ರಸ್ತೆಯ ಮೇಲೆ ನೀರು ಹರಿಯುವುತ್ತಿದ್ದು ಸಾರ್ವಜನಿಕರು ಓಡಾಡದಂತೆ ಮುಂಜಾಗ್ರತಾ ಕ್ರಮವಾಗಿ ಗ್ರಾಮ ಪಂಚಾಯಿತಿಯಿಂದ ತಾತ್ಕಾಲಿಕ ಬೇಲಿ ಹಾಕಿಸಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಗಿದೆ. ರಾಂಪುರ ಹಾಗೂ ಹಿರೇವಡ್ರಹಳ್ಳಿ ಗ್ರಾಮಗಳಲ್ಲಿ ಸಿಬ್ಬಂದಿಗಳು ಸಂಚರಿಸಿ ಪರಿಶೀಲನೆ ಮಾಡಲಾಗಿದೆ ಎಂದರು.



ಹವಮಾನ ಇಲಾಖೆಯ ವರದಿ ಪ್ರಕಾರ ಇನ್ನೂ 2 ದಿನ ಹೆಚ್ಚಿನ ಮಳೆಯಾಗಲಿರುವುದರಿಂದ ತಾಲೂಕಿನ ಎಲ್ಲಾ ಗ್ರಾಮ ಆಡಳಿತ ಅಧಿಕಾರಿಗಳು ತಮ್ಮ ತಮ್ಮ ಕೇಂದ್ರಸ್ಥಾನದಲ್ಲಿದ್ದು, ಹಾನಿಯ ಬಗ್ಗೆ ಕ್ಷಣ ಕ್ಷಣದ ಮಾಹಿತಿಯನ್ನು ನೀಡುವಂತೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ ಎಂದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
SCAN to READ HAMPI TIMES E-PAPER

**ಹಂಪಿ ಟೈಮ್ಸ್ ಓದುಗರ ಸಂಭ್ರಮ!**

ಜೂನ್ 21, 2025 ಹಂಪಿ ಟೈಮ್ಸ್ ತನ್ನ ಎರಡನೇ ವರ್ಷದ ಪಯಣವನ್ನ ಪ್ರಿಂಟ್ ಮತ್ತು ಡಿಜಿಟಲ್ ಮೂಲಕ ಯಶಸ್ವಿಯಾಗಿ ಪೂರೈಸುತ್ತಿದೆ. ಈ ಪ್ರಯಾಣದ ಎಲ್ಲಾ ಹೆಜ್ಜೆಗೂ ನಿಮ್ಮ ಬೆಂಬಲ, ಪ್ರೀತಿ ಹಾಗೂ ಮಾರ್ಗದರ್ಶನಕ್ಕೆ ಅನಂತ ಧನ್ಯವಾದಗಳು.

ಈ ಸಂದರ್ಭದಲ್ಲಿ ಪತ್ರಿಕೆಯ ಪಯಣದ ಬಗ್ಗೆ ನಿಮ್ಮ ಸಂತಸ, ಮೆಚ್ಚುಗೆ, ಪ್ರೋತ್ಸಾಹ ಹಾಗೂ ಸಲಹೆಗಳನ್ನು ಬರೆದು ನಮ್ಮೊಂದಿಗೆ ಹಂಚಿಕೊಳ್ಳಿ. ನಿಮ್ಮ ಅಭಿಪ್ರಾಯಗಳು ನಮ್ಮ ಹೃದಯ ಸ್ಪರ್ಶಿಸುತ್ತವೆ.

**ಹಂಪಿ ಟೈಮ್ಸ್ ಬಗ್ಗೆ ನಿಮ್ಮ ಅಭಿಪ್ರಾಯವೇನು?**
**ಇಲ್ಲಿ ಪ್ರಕಟವಾದ ಯಾವ ಲೇಖನ ನಿಮಗೆ ಸ್ಫೂರ್ತಿ ನೀಡಿತು?**
**ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಗತಿಗೆ ಹಂಪಿ ಟೈಮ್ಸ್ ಪಾತ್ರ ?**
**ಏನೇನನ್ನು ಇನ್ನಷ್ಟು ಉತ್ತಮಪಡಿಸಬಹುದು ಎಂದು ನೀವು ಭಾವಿಸುತ್ತೀರಿ?**
ನಿಮ್ಮ ಅಭಿಪ್ರಾಯ/ ಆಲೋಚನೆ/ ಕವನ/ ಲೇಖನ/ ಚುಟುಕು ಬರಹ ಅಥವಾ ವಿಡಿಯೋ ಸಂದೇಶಗಳನ್ನೂ ಸಹ ಸ್ವಾಗತಿಸುತ್ತೇವೆ. ನಿಮ್ಮ ಅಭಿಪ್ರಾಯಗಳ ಜೊತೆ ಭಾವಚಿತ್ರ ಇರಲಿ...

ನಿಮ್ಮ ಅಭಿಪ್ರಾಯಗಳನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಿ:
Email: hampitimes@gmail.com
WhatsApp: 9448633038
ಅಥವಾ ನೇರವಾಗಿ ನಮ್ಮ ಆಫೀಸ್‌ಗೆ ನೀಡಬಹುದು.

**ನಿಮ್ಮ ಮಾತು ನಮಗೆ ಮಾರ್ಗದರ್ಶನ –**
ಹಂಪಿ ಟೈಮ್ಸ್ ಮುಂದಿನ ಹಂತದ ಬೆಳವಣಿಗೆಗೆ ನೀವು ಸ್ಫೂರ್ತಿ!
ನಿಮ್ಮ ಅಭಿಪ್ರಾಯವನ್ನು ಜೂನ್ 18ರೊಳಗೆ ಕಳುಹಿಸಿ – ಆಯ್ದ ಬರಹಗಳು ವಾರ್ಷಿಕ ವಿಶೇಷ ಪುರವಣಿಯಲ್ಲಿ ಪ್ರಕಟವಾಗುತ್ತವೆ!

ಬಸಾಪುರ ಬಸವರಾಜ
ಸಂಪಾದಕ

Address:
Editor, Hampi Times
# 32nd Ward, Near Valmiki Circle,
Bamboo Bazar, Hosapete-583201

Mobile
9448633038
Email:
hampitimes@gmail.com

E-paper Readers - 1,30,000+ | 17 lakh + Event Count